# ಮೂರು ಮಾರ್ಗಗಳು

## ಅಧ್ಯಯನ # 9



## ಸತ್ಯವೇದದಲ್ಲಿರುವ ಮಹಾ ಸತ್ಯೋಪದೇಶಗಳು

“ನಿನ್ನ ವಾಕ್ಯವೇ ಸತ್ಯವು” - ಯೋಹಾನನು 17:17

ಸತ್ಯವೇದದಲ್ಲಿರುವ ಮಹಾ ಸತ್ಯೋಪದೇಶಗಳು

## ಅಧ್ಯಯನ # 9

# ಮೂರು ಮಾರ್ಗಗಳು

**ದಯವಿಟ್ಟು ಗಮನಿಸಿ: ಈ ತರಗತಿಯಲ್ಲಿ ತಿಳಿಸಲಾಗಿರುವ ಎಲ್ಲಾ ವಾಕ್ಯಗಳನ್ನು ಸತ್ಯವೇದದಲ್ಲಿ ಓದುವ ಮೂಲಕ ನಿಮ್ಮ ಅಭ್ಯಾಸವನ್ನು ಮುಂದುವರಿಸಿರಿ.**

**ಇಲ್ಲಿ ಉಪಯೋಗಿಸಿರುವ ಅತ್ಯಧಿಕವಾದ ವಾಕ್ಯಭಾಗಗಳು(ಕೆ.ಜೆ.ವಿ) ಭಾಷಾಂತರದಿಂದ ತೆಗೆದುಕೊಳ್ಳಲಾಗಿದೆ.**

ಈ ದಿನ ನಾವು ಸತ್ಯವೇದದಲ್ಲಿರುವ “**ಮೂರು ಮಾರ್ಗ**”ಗಳನ್ನು ಕುರಿತು ಅಭ್ಯಾಸ ಮಾಡಲಿದ್ದೇವೆ.

ಸಾಮಾನ್ಯವಾಗಿ ನಾವು “**ಎರಡು ಮಾರ್ಗಗಳ**” ಬಗ್ಗೆ ಕೇಳಿದ್ದೇವೆ

ಆದರೆ ಈ ಮೂರನೇ ಮಾರ್ಗ ಯಾವುದು, ನೀವು ಆಶ್ಚರ್ಯಪಡುತ್ತಿರಬಹುದು?

ಈ ದಿನದ **ಪಾಠದ ಕೊನೆಯಲ್ಲಿ** ನಾವು ಈ ಮೂರನೇ ಮಾರ್ಗದ ಬಗ್ಗೆ ನೋಡಲಿದ್ದೇವೆ ಮತ್ತು ಅರ್ಥಮಾಡಿಕೊಳ್ಳಲಿದ್ದೇವೆ!

ಮೊದಲು ನಮಗೆ ತಿಳಿದಿರುವ ಈ ಎರಡು ಮಾರ್ಗಗಳ ಬಗ್ಗೆ ನೋಡೋಣ, ಕೆಳಗಿನ ವಾಕ್ಯದಲ್ಲಿ ಹೀಗೆ ಓದುತ್ತೇವೆ

## ಮತ್ತಾಯ 7:13,14

ಯೇಸು ಮುಂದಿನವುಗಳ ಬಗ್ಗೆ ಮಾತನಾಡುತ್ತಾರೆ–

**ಅಗಲವಾದ ದಾರಿ ಜೊತೆಗೆ ದೊಡ್ಡದಾದ ಬಾಗಿಲು**

“ ನಾಶಕ್ಕೆ ಹೋಗುವ ಬಾಗಲು ದೊಡ್ಡದು, ದಾರಿ ಅಗಲವು; ಅದರಲ್ಲಿ ಹೋಗುವವರು ಬಹು ಜನ. ”

ಮತ್ತು.....

## ಬಿಕ್ಕಟ್ಟಾದ ದಾರಿ ಜೊತೆಗೆ ಇಕ್ಕಟ್ಟಾದ ಬಾಗಿಲು

"ನಿತ್ಯಜೀವಕ್ಕೆ ಹೋಗುವ ಬಾಗಿಲು ಇಕ್ಕಟ್ಟು, ದಾರಿ ಬಿಕ್ಕಟ್ಟು;
ಅದನ್ನು ಕಂಡು ಹಿಡಿಯುವವರು ಸ್ವಲ್ಪ ಜನ"



## ಇವೆರಡು ಮಾರ್ಗಗಳು ಯಾವುವು?

ಸಂಪ್ರದಾಯವಾಗಿ ಅವು .... **ಪರಲೋಕಕ್ಕೆ ಮತ್ತು..... ನರಕಕ್ಕೆ** ಕೊಂಡೊಯ್ಯುತ್ತದೆ ಎಂದು ಅಂದುಕೊಂಡಿದ್ದಾರೆ !!

## ಇದು ಸರಿಯೇ?

ನೆನಪಿರಲಿ, ಇದು ಯೇಸು ಹೇಳಿದ ಮಾತುಗಳು!

ಈಗ ಯೇಸು ಹೇಳಿದ ಕೆಲವು ವಾಕ್ಯಗಳನ್ನು ಓದೋಣ–

### ಮತ್ತಾಯ 13:34

"ಯೇಸು ಈ ಮಾತುಗಳನ್ನೆಲ್ಲಾ ಜನರ ಗುಂಪುಗಳಿಗೆ ಸಾಮ್ಯರೂಪವಾಗಿ ಹೇಳಿದನು; ಸಾಮ್ಯವಿಲ್ಲದೆ ಒಂದನ್ನೂ ಹೇಳಲಿಲ್ಲ."

ಹೌದು! ನಾವು ನೆನಪಿಡಬೇಕಾದದ್ದೇನೆಂದರೆ ಯೇಸು ಯಾವಾಗಲೂ ಸಾಮ್ಯರೂಪವಾಗಿ ಹೇಳುತ್ತಿದ್ದರು...!!!!!

ಆತನು 39 ಸಾಮ್ಯ ಅಥವಾ ಸಣ್ಣ ಕಥೆಗಳಲ್ಲದೆ
ಅನೇಕ ಸಾಮ್ಯರೂಪದ ಹೇಳಿಕೆಗಳನ್ನೂ ಸಹ ಹೇಳಿರುವನು.

ಆದ್ದರಿಂದ ಇಲ್ಲಿಯೂ ಸಹ ಮಾರ್ಗಗಳು ಎಂಬದು ಸಾಮ್ಯರೂಪದ ಹೇಳಿಕೆಯಾಗಿದೆ.

**ಅವುಗಳ ಅರ್ಥವೇನು?**

ಇದನ್ನು ನಾವು ಉದಾಹರಣೆ ಮತ್ತು ದೃಷ್ಟಾಂತದ ಮೂಲಕ
ಅರ್ಥಮಾಡಿಕೊಳ್ಳಬಹುದು.

ಒಬ್ಬ ಹುಡುಗ ಅಥವಾ ಹುಡುಗಿ ಕೆಟ್ಟ ಚಟುವಟಿಕೆಗಳಲ್ಲಿ
ತೊಡಗಿಕೊಂಡು ದಾರಿ ತಪ್ಪುತ್ತಿದ್ದರೆ,

ತಂದೆ ತಾಯಿಯರು ಅವನನ್ನು ಅಥವಾ ಅವಳನ್ನು ಕರೆದು ಹೀಗೆ ಪ್ರಶ್ನಿಸುತ್ತಾರೆ –

**ನಿಮ್ಮ ಜೀವನವು ಯಾವ ಮಾರ್ಗದಲ್ಲಿದೆ?**

**ಇದರ ಅರ್ಥವೇನು?**

**ಇದು ನಾವು ತೆಗೆದುಕೊಳ್ಳುವ ಜೀವನದ ದಾರಿಯನ್ನು ಸೂಚಿಸುತ್ತದೆ!**

**ಹೌದು! ಇಲ್ಲಿ ಯೇಸು ಸಹ ಆತನ ದಿನಗಳಲ್ಲಿನ ಎರಡು ಜೀವನದ ಆಯ್ಕೆಗಳ ಬಗ್ಗೆ ಸೂಚಿಸುತ್ತಿದ್ದಾರೆ.**

**ಅಗಲವಾದ ದಾರಿ.....ಮತ್ತು ಇಕ್ಕಟ್ಟಾದ ದಾರಿ!**

ಇದಲ್ಲದೆ ನಾವು ಗಮನಿಸಬೇಕಾದದ್ದೇನೆಂದರೆ, ಇಲ್ಲಿ ನಾವು ಹೋಗಿ ಸೇರಬೇಕಾದ
ಸ್ಥಳದ ಬಗ್ಗೆ ತಿಳಿಸಿಲ್ಲ

ಉದಾ: ಪರಲೋಕ ಅಥವಾ ನರಕ

ಒಂದು ದಾರಿ "ನಾಶಕ್ಕೆ" ಕೊಂಡೊಯ್ಯುತ್ತದೆ ಮತ್ತು ಇನ್ನೊಂದು ದಾರಿ "ನಿತ್ಯ
ಜೀವಕ್ಕೆ" ಕೊಂಡೊಯ್ಯುತ್ತದೆ

**ಇದರ ಅರ್ಥವೇನು?**

ಈ "ನಾಶಕ್ಕೆ" ಮತ್ತು "ಜೀವಕ್ಕೆ" ಎಂಬುದರ ಅರ್ಥವೇನು?

ಇದಕ್ಕೆ ಉತ್ತರವನ್ನು ತಿಳಿದುಕೊಳ್ಳಲು ಈ ದಾರಿಗಳ ಬಗ್ಗೆ
ನಾವು ವಿವರವಾಗಿ ಅಭ್ಯಾಸ ಮಾಡಬೇಕು!

## ಮೊದಲನೇ ಮಾರ್ಗ ದಾರಿ

# ಅಗಲವಾದ ದಾರಿ

ಈಗ ನಾವು **ಅಗಲವಾದ ದಾರಿಯ** ಬಗ್ಗೆ ಅಭ್ಯಾಸ ಮಾಡೋಣ–

**ಮತ್ತಾಯ 7:13**

"ಇಕ್ಕಟ್ಟಾದ ಬಾಗಲಿನಿಂದ ಒಳಕ್ಕೆ ಹೋಗಿರಿ. ನಾಶಕ್ಕೆ ಹೋಗುವ ಬಾಗಲು ದೊಡ್ಡದು, ದಾರಿ ಅಗಲವು; ಅದರಲ್ಲಿ ಹೋಗುವವರು ಬಹು ಜನ."

**ಇಲ್ಲಿ "ದಾರಿ ಅಗಲವು" ಎಂದರೇನು?**

**ಮತ್ತು "ನಾಶಕ್ಕೆ" ಎಂದರೇನು?**

ನಾವು ಇನ್ನೂ ಓದುವದೇನೆಂದರೆ "ಅದರಲ್ಲಿ ಹೋಗುವವರು ಬಹು ಜನ"

ಈ ದಾರಿಯಲ್ಲಿ ಲೋಕದ ಅತ್ಯಧಿಕವಾದ ಜನರು ನಡೆಯುತ್ತಾರೆಂದು ತೋರುತ್ತದೆ!!



## ಈ ದಾರಿ ಯಾವುದು?

ಈ ದಾರಿಯು ಬಗ್ಗೆ ಮತ್ತೆ ಹೀಗೆ ಓದುತ್ತೇವೆ–

### ಜ್ಞಾನೋಕ್ತಿಗಳು 14:12

"ಮನುಷ್ಯದೃಷ್ಟಿಗೆ ಸರಳವಾಗಿ ತೋರುವ ಒಂದು ದಾರಿಯುಂಟು. ಅದು ಕಟ್ಟಕಡೆಗೆ ಮರಣಮಾರ್ಗವೇ."

ಆಹ್, ಹೌದು! ಜೀವನದ ಪಯಣ ಅಥವಾ ದಾರಿಯು ಮನುಷ್ಯಕುಲಕ್ಕೆ ಈಗ "ಸರಳವಾಗಿ ತೋರುತ್ತದೆ"......

....ಆದರೆ ಕಟ್ಟಕಡೆಗೆ ನಾವು ಓದುವ ಹಾಗೆ ಅದು "ಮರಣದ ಮಾರ್ಗವೇ."



**ಯಾವ ವಿಧವಾದ 'ದಾರಿ'ಯು "ಮರಣ ಮಾರ್ಗ"ದಲ್ಲಿ ಕೊನೆಗೊಳ್ಳುತ್ತೇವೆ?**

ಇದರ ಸ್ಪಷ್ಟವಾದ ಉತ್ತರವನ್ನು ಸತ್ಯವೇದದಲ್ಲಿ ಹೀಗೆ ಓದುತ್ತೇವೆ–

## ರೋಮಾಪುರದವರಿಗೆ 6:23

### "ಪಾಪವು ಕೊಡುವ ಸಂಬಳ ಮರಣ"

ಹೌದು! ಪಾಪದ ಫಲ ಅಥವಾ ಪಲಿತಾಂಶವು ಮರಣವೆಂದು ನಮಗೆ ಗೊತ್ತಿದೆ.

ಆದ್ದರಿಂದ ಈ ದಾರಿಯೇ **ಪಾಪದ ದಾರಿಯಾಗಿರಬೇಕು!**

ಹೌದು! ಇಲ್ಲಿ **ಮರಣವನ್ನು** ನಾಶವೆಂದು ಸೂಚಿಸಲಾಗಿದೆ!

**ಸ್ವಲ್ಪ ಯೋಚಿಸಿ ನೋಡಿರಿ!**

ಈ ಲೋಕದಲ್ಲಿ ಮತ್ತು ಜೀವನದಲ್ಲಿ ಅನೇಕ ವಿಧವಾದ ನಾಶನಗಳನ್ನು ನಮ್ಮ ಸುತ್ತಲೂ ನೋಡುತ್ತಿರುತ್ತೇವೆ–

**ವ್ಯಾಪಾರದಿಂದ ನಷ್ಟ** ಅಥವಾ ದಿವಾಳಿಯಿಂದ ನಾಶನ.

ಮನೆ ಅಥವಾ ಕಟ್ಟಡಕ್ಕೆ ಹತ್ತಿಕೊಳ್ಳುವ ಬೆಂಕಿ ಅಥವಾ ಪ್ರಕೃತಿಯ ವಿಕೋಪಗಳಿಂದ ನಾಶನ.

ಸ್ನೇಹಿತರಲ್ಲಿ ಉಂಟಾಗುವ ಜಗಳ, ಹೊಟ್ಟೆಕಿಚ್ಚಿನಿಂದ ಉಂಟಾಗುವ **ನಾಶನ.**

ಪಟ್ಟಣಗಳು/ದೇಶಗಳಿಗೆ ಸುನಾಮಿ, ಯುದ್ಧ, ಭೂಕಂಪ, ಸುಂಟರಗಾಳಿ ಇತರೆಗಳಿಂದ ಉಂಟಾಗುವ ನಾಶನ

ವಿವಾಹ ವಿಚ್ಛೇದನಗಳಿಂದ ಉಂಟಾಗುವ ನಾಶನ

**ಶರೀರಕ್ಕೆ ರೋಗ,** ಅಪತ್ತುಗಳಿಂದ ಉಂಟಾಗುವ **ನಾಶನ** ಇತರೆ

ಇವೆಲ್ಲ ನಾಶನಗಳಿಂದ ಸಾಮಾನ್ಯ ಸ್ಥಿತಿಗೆ ಮರಳಿ ಬರುವುದಕ್ಕೆ ದಾರಿಯಿದೆ, ಆದರೆ ಒಂದು ವಿಧವಾದ ನಾಶನವಿದೆ ಅದು.......ಕೊನೆಯದಾಗಿದೆ ಮತ್ತು ಅದುವೇ.....ಮರಣ.



**ಹೌದು! ಮರಣವೇ ಅತಿ ಭಯಂಕರವಾದ ನಾಶನ!!!**

ನೀವೆಲ್ಲಾ ಒಂದಲ್ಲಾ ಒಂದು ಸಾರಿ ಶವಸಂಸ್ಕಾರಕ್ಕೆ ಹೋಗಿರಬಹುದು!



ಈ ಎಲ್ಲ ಶವಸಂಸ್ಕಾರಗಳಲ್ಲಿ **ಸಂಪೂರ್ಣವಾದ ಅಸಹಾಯಕತೆ** ಮತ್ತು ಭಯಂಕರವಾಗಿ **ಕಳೆದು ಕೊಂಡಂತಹ ಭಾವ** ನಿಮಗೆ ನೆನಪಿದೆಯೇ?

ಹೌದು! ಮಾನವ ಕುಲದ **ಮೊದಲನೆಯ ಶವ ಸಂಸ್ಕಾರ** ಇದೇ ರೀತಿ ಇತ್ತು.


**ಸ್ವಲ್ಪ ನಿಮ್ಮ ಕಣ್ಣುಗಳನ್ನು ಮುಚ್ಚಿ ಅದು ಹೇಗಿದ್ದಿರ ಬಹುದೆಂದು ಊಹಿಸಿ ನೋಡಿರಿ!**



ಕಾಯಿನನು ತಾನು ಏನೋ ಭಯಂಕರವಾದದ್ದನ್ನು ಹೇಬೆಲನಿಗೆ ಮಾಡಿದ್ದೇನೆಂದು ಮನವರಿಕೆ ಮಾಡಿಕೊಂಡನು ಮತ್ತು ಎಲ್ಲೆಲ್ಲಿಯೂ ರಕ್ತವನ್ನು ನೋಡಿ, ಅಲ್ಲಿಂದ ಓಡಿ ಹೋಗಿ ತನ್ನ ತಂದೆ ತಾಯಿ ಮತ್ತು ಚಿಕ್ಕ ಸಹೋದರಿಯರಿಂದ ಮರೆಯಾಗಿರಬಹುದು.

ಸಮ೦ಯ ಕಳೆದಂತೆ ಮಕ್ಕಳು ಮನೆಗೆ ಹಿಂದಿರುಗದೇ ಇದ್ದಾಗ ಆದಾಮ ಮತ್ತು ಹವ್ವಳಿಗೆ **ಚಿಂತೆ** ಮತ್ತು **ವ್ಯಾಕುಲತೆವುಂಟಾಯಿತು** ಮತ್ತು ಅವರು ಹುಡುಕುತ್ತಾ ಹೋಗಿ ಹೇಬೆಲನು **ಮಲಗಿರುವ** ಹಾಗೆ ಇದ್ದದ್ದನ್ನು ಮತ್ತು ರಕ್ತಸ್ರಾವವಾಗುವದನ್ನು ಕಂಡರು.

ಅವರು ಹೇಬೆಲನನ್ನು ಮೆಲ್ಲಗೆ ಅಲುಗಾಡಿಸಿ ಅವನನ್ನು ಎಬ್ಬಿಸಲು ಪ್ರ೦ಯತ್ನಿಸಿದ್ದಿರಬಹುದು ಮತ್ತು ಇದರಿಂದ ೦ಯಾವ ಪ್ರತಿಕ್ರಿ೦ಯೆ ಇಲ್ಲದಿರುವಾಗ ಹವ್ವಳು ಆದಾಮನಿಗೆ ಹೀಗೆ ಹೇಳಿರಬಹುದು–



"ಹೇಬೆಲನು ಇಷ್ಟು ಗಾಢವಾಗಿ ನಿದ್ರಿಸುವುದನ್ನು ನಾನೆಂದು ನೋಡಿಲ್ಲ"

ಮತ್ತು ಸಮ೦ಯ ಕಳೆದಂತೆ ಹೇಬೆಲನು ನಿದ್ರಿಸುವುದು ಮುಂದುವರಿಯಿತು ಹಾಗು ಆತನ ಶರೀರವು ಬದಲಾಗುತ್ತಾ ಬಿಗಿ೦ಯಾಯಿತು, ಆದಾಮನಿಗೆ **ಉಂಟಾದ ೦ಯೋಚನೆ** ಏನೆಂದರೆ, ಹೇಬೆಲನು ಸತ್ತುಹೋದನು!

**ಮತ್ತು ೦ಯೆಹೋವ ದೇವರು ಹಣ್ಣನ್ನು ತಿಂದ ದಿನ ಸತ್ತೇ ಹೋಗುವಿ ಎಂದು ಹೇಳಿದ ಅರ್ಥವು ಇದೇ ಆಗಿತ್ತು !!**

ಆದಾಮ ಮತ್ತು ಹವ್ವಳು ಮತ್ತು ಅವರ ಚಿಕ್ಕ ಕುಟುಂಬವು ದು:ಖಿಸಿದ್ದನ್ನು ಮತ್ತು ಗೋಳಾಡಿದ್ದನ್ನು ಒಬ್ಬನು ಊಹಿಸಬಹುದು.

**.......ಭೂಮಿಯಲ್ಲಿನ ಮೊದಲನೆ೦ಯ ಶವಸಂಸ್ಕಾರ!!**

ಹೌದು! ನಿಜವಾಗಿಯೂ! ಅಲ್ಲಿ ಆರಂಭವಾದ ಪಾಪ ಮತ್ತು ಮರಣದ "ದಾರಿ"ಯು ಇದುವೇ ಮತ್ತು ಇಂದು ಕಾಲಿಡುತ್ತಿರುವ ಇಡೀ ಲೋಕದ **ಮಾನವಕುಲದ** ದಾರಿ!

**ಇದುವೇ "ಮರಣ ಮಾರ್ಗ" ಅಥವಾ "ನಾಶ"ಕ್ಕೆ ಕೊಂಡೊಯ್ಯುವ ಅಗಲವಾದ ದಾರಿ.**

ಹೌದು! **ಲೋಕದ ಕೋಟ್ಯಾಂತರ ಜನರು** ಈ ದಾರಿಯಲ್ಲಿ ನಡೆಯುತ್ತಾರೆಂದು ಮುಂದೆ ಓದುತ್ತೇವೆ – "ಅದರಲ್ಲಿ ಹೋಗುವವರು ಬಹು ಜನ"

ಈ ಪಾಪದ **ಅಗಲವಾದ ದಾರಿಯು**.....ಸ್ವಾಸ್ತ್ಯವಾಗಿ ಬಂದಂತಹ ಸ್ಥಿತಿಯು ಒಬ್ಬನು(ಳು) ಹುಟ್ಟಿದಾಗಲೇ ಪಡೆದುಕೊಂಡಿರುವದನ್ನು ಕೆಳಗಿನ ವಾಕ್ಯದಲ್ಲಿ ಓದುತ್ತೇವೆ –

**ಕೀರ್ತನೆ 51:5**

"ಹುಟ್ಟಿದಂದಿನಿಂದ ನಾನು ಪಾಪಿಯೇ; ಮಾತೃಗರ್ಭವನ್ನು ಹೊಂದಿದ ದಿನದಿಂದ ದ್ರೋಹಿಯೇ."

ಅನೇಕರು ಈ ವಾಕ್ಯದ ಆಳವನ್ನು ತಪ್ಪಾಗಿ ಅರ್ಥಮಾಡಿಕೊಂಡಿದ್ದಾರೆ ಮತ್ತು ಕೀರ್ತನೆಗಾರನಾದ ದಾವೀದನು ತನ್ನ ಬಗ್ಗೆಯೇ ಮಾತನಾಡಿಕೊಂಡಿದ್ದಾನೆಂದು ಅನೇಕರು ತಿಳಿದಿದ್ದಾರೆ!

**ಆದರೆ ಅದು ಹಾಗಲ್ಲ!**

ಏಕೆಂದರೆ ನಾವು ಮುಂದೆ ಸ್ಪಷ್ಟವಾಗಿ ಹೀಗೆ ಓದುತ್ತೇವೆ –

**ರೋಮಾಪುರದವರಿಗೆ 5:12**

"ಈ ವಿಷಯ ಹೇಗಂದರೆ – ಒಬ್ಬ ಮನುಷ್ಯನಿಂದಲೇ ಪಾಪವೂ ಪಾಪದಿಂದ ಮರಣವೂ ಲೋಕದೊಳಗೆ ಸೇರಿದವು; ಎಲ್ಲರು ಪಾಪ ಮಾಡಿದ್ದರಿಂದ ಮರಣವು ಹೀಗೆ ಎಲ್ಲರಲ್ಲಿಯೂ ವ್ಯಾಪಿಸಿತು."

**ಇಲ್ಲಿ ಅಷ್ಟು ಸ್ಪಷ್ಟವಾಗಿದೆ!**

ಈ "ಮರಣ" ಮತ್ತು "ಪಾಪದ ಸ್ಥಿತಿಯು" ಎಲ್ಲಾ ಮನುಷ್ಯರ ಮೇಲೆ ಬಂದಿದೆ....ಗರ್ಭಧಾರಣೆಯಿಂದ ಬಂದಿದೆ.

**ತಾಯಿಯ ಗರ್ಭದಿಂದಲೇ ಬಂದಿದೆ!!!**

## ಹೌದು! ದಾವೀದನು ಈ ಮಹಾಸತ್ಯವನ್ನು ನಮಗೆ ಸ್ಪಷ್ಟವಾಗಿ ವಿವರಿಸಿದ್ದಾನೆ.

ಹೌದು! ಈ ಮಾರ್ಗವನ್ನು ಪ್ರವೇಶಿಸಲು, ಹಾಗೂ ಇದರಲ್ಲಿ ನಡೆಯಲು,ಪಾಪದ ಮೂಲಕ ಅದನ್ನು ಉದ್ಘಾಟಿಸಿದವನು ಆದಾಮನೆಂಬ ಒಬ್ಬ ಮನುಷ್ಯನು.



ಅವನಿಗೆ ಈ ದಾರಿಯನ್ನು ನಡೆದು ಮುಗಿಸಲು (ಮರಣವೆಂಬ ನಾಶನ) **930** ವರುಷಗಳಾದವು (**ಆದಿಕಾಂಡ** 5:5) ಆದರೆ **ಈ ದಿನ** ಈ ಪ್ರ0ಯಾಣವು ಅತಿ ಕಡಿಮೆ ಸಮ0ಯದಲ್ಲಿ ಮುಗಿ0ಯುತ್ತಿದೆ – 80 ವರುಷ/60 ವರುಷ/ಅಥವಾ 30 ವರುಷಗಳು!




ಏಕೆಂದರೆ ಸುಮಾರು 60 ಶತಮಾನಗಳು ಅಥವಾ 6000 ವರ್ಷಗಳಿಗಿಂತಲೂ ಹೆಚ್ಚಾಗಿ ಅನೇಕರು ಈ "ದಾರಿ"ಯಲ್ಲಿ ನಡೆಯುತ್ತಿದ್ದಾರೆ. (ಅಂದರೆ ಪಾಪ ಮಾಡಲು ಅತಿ ಸುಲಭ) ಮತ್ತು ಈಗ ಒಬ್ಬನು(ಳು) ಸುಲಭವಾಗಿ..... ಜಾರಬಹುದು (ಸಹಜವಾಗಿ

ಮತ್ತು ತಾನಾಗಿಯೇ ಪಾಪ ಮಾಡುವದು) **ಮತ್ತು** ಬಹಳ ಬೇಗನೆ ಕೊನೆಯನ್ನು ತಲುಪಬಹುದು.

**ಮನುಷ್ಯನಿಗೆ ಪಾಪವು ಎಷ್ಟು ಸಾಮಾನ್ಯವಾಗಿದೆ ಎಂದರೆ ಸರಿಯಾದದ್ದನ್ನು ಮಾಡುವುದಕ್ಕಿಂತ ಪಾಪ ಮಾಡುವುದು ಸುಲಭವಾಗಿದೆ !**

**ಪಾಪ** ಮನುಷ್ಯನ ರಕ್ತ ಮತ್ತು ಅನುವಂಶಿಕತೆಯಲ್ಲಿಯೇ ಪ್ರವೇಶಿಸಿದೆ.

ಹೌದು! ಪಾಪವು ಅಷ್ಟರ ಮಟ್ಟಿಗೆ ಅಭಿವೃದ್ಧಿ ಹೊಂದಿದೆ.....ಮತ್ತು ಮಾನವ ಕುಲವು ನೀತಿಯ ದೃಷ್ಟಿಯನ್ನು ಸಂಪೂರ್ಣವಾಗಿ ಕಳೆದುಕೊಂಡಿದೆ......ಆದ್ದರಿಂದ ಕೆಳಗಿನ ವಾಕ್ಯದಲ್ಲಿ ಹೀಗೆ ಬರೆದಿದೆ –




**ಜ್ಞಾನೋಕ್ತಿ 14:12**

“ಮನುಷ್ಯದೃಷ್ಟಿಗೆ ಸರಳವಾಗಿ ತೋರುವ ಒಂದು ದಾರಿಯುಂಟು. ಅದು ಕಟ್ಟಕಡೆಗೆ ಮರಣಮಾರ್ಗವೇ.”

ಹೌದು! ನೀವು ಊಹಿಸಬಲ್ಲಿರಾ?

ಈ ದಿನ **ಪಾಪದ** ದಾರಿಯು ಮನುಷ್ಯನ ದೃಷ್ಟಿಗೆ **ಸರಿಯಾದದ್ದು** ಮತ್ತು **ಸಮ್ಮತವಾದದ್ದಾಗಿ ತೋರುತ್ತದೆ!**

ಈ ಸತ್ಯಂಶದ ಆಳವನ್ನು ಚೆನ್ನಾಗಿ ಅರ್ಥಮಾಡಿಕೊಳ್ಳಲು ಕೆಲವು

ಉದಾಹರಣೆಗಳೊಂದಿಗೆ ಪಾಪದ ದಾರಿಯು ಮಾನವ ಕುಲಕ್ಕೆ ಎಷ್ಟು ಸಾಧಾರಣವಗಿದೆಯೆಂದು ನೋಡೋಣ –

# ಸುಳ್ಳು

ಇದು ಸತ್ಯವಲ್ಲದ ಮಾತನ್ನು ಸೂಚಿಸುತ್ತದೆ ಅಥವಾ ಇದು......**ಅಸತ್ಯ** ಮತ್ತು **ತಪ್ಪು**ನ್ನು ಸೂಚಿಸುತ್ತದೆ.

ನಾವು ಒಂದು ದಿನಕ್ಕೆ ಸುಮಾರು 250 ಸುಳ್ಳುಗಳನಾಡುತ್ತೇವೆ ಎಂದು ಹೇಳಲಾಗಿದೆ!

ಇದು ವಿಸ್ಮಯಕರವಾದ ವಿಷಯವಾಗಿ ತೋರುತ್ತದೆ ಆದರೆ ನಾವು ಯಾವ ತೀರಿಯಲ್ಲಿ ಸುಳ್ಳಾಡುತ್ತೇವೆಂದು ಈಗ ಪರೀಕ್ಷಿಸೋಣ.

ಒಬ್ಬರು ನಿಮ್ಮನ್ನು ಭೇಟಿಯಾಗಿ ಹೇಗಿದ್ದೀರ ಎಂದು ಕೇಳಿದಾಗ ನಿಜಾಂಶ ಹೇಳದೆ ಚೆನ್ನಾಗಿದ್ದೇವೆಂದು ಸುಳ್ಳು ಹೇಳುವುದು, ವ್ಯವಹಾರ ನಡೆಸುವಾಗ ಬೆಲೆಯ ವಿಷಯದಲ್ಲಿ, ವಸ್ತುಗಳನ್ನು ತಲುಪಿಸುವದರ ಬಗ್ಗೆ, ಸಮಯ ಬದ್ಧತೆ, ಇತರೆಗಳಲ್ಲಿ ಸುಳ್ಳಾಡುವದು.

ಮತ್ತೊಬ್ಬರ **ಮನೆಗೆ** ಭೇಟಿಕೊಟ್ಟು ಅವರು ಬಡಿಸಿದ ಊಟದ ಬಗ್ಗೆ ಪ್ರಶ್ನಿಸಿದಾಗ ಅದರ ರುಚಿಯ ಬಗ್ಗೆ ಸುಳ್ಳಾಡುವದು!

ಬಡಿಸಿದ ಊಟ ಒಬ್ಬನಿ(ಳಿ)ಗೆ ತೃಪ್ತಿಯಿಲ್ಲದಿರಬಹುದು ಆದರೂ "ಊಟ ಹೇಗಿತ್ತು"?

ಎಂಬ ಪ್ರಶ್ನೆಗೆ – **ಅದ್ಭುತ!**

**ಊಟ ಬಹಳ ರುಚಿಯಾಗಿತ್ತು,** ಎಂದು ಸುಳ್ಳು ಹೇಳುವುದು

**ಈ ಪಾಕವಿಧಾನವನ್ನು ಎಲ್ಲಿಂದ ಪಡಕೊಂಡಿರಿ?**

**ಅದನ್ನು ನನಗೂ ಕೊಡುವಿರೇ?** ಎಂದು ಹೇಳುವುದು.

ಮಕ್ಕಳು ದೊಡ್ಡವರಿಗೆ ವಿಧೇಯರಾಗಲು ಕಾಲ್ಪನಿಕವಾದ ಭಯಾನಕ ಜೀವಿಗಳ ಹೆಸರನ್ನು ಹೇಳುವದು ಉದಾ: ಗುಮ್ಮ, ರಾಕ್ಷಸ ಇತರೆ!

ಸಣ್ಣ ವಿಷಯದ ಸುಳ್ಳುಗಳನ್ನು..... "ಬಿಳಿ" ಸುಳ್ಳು ಮತ್ತು ಗಂಭೀರವಾದ ವಿಷಯದ ಮೇಲಿನ ಸುಳ್ಳನ್ನು "ಕಪ್ಪು" ಸುಳ್ಳು ಎನ್ನುವರು. ಕಪ್ಪು ಸುಳ್ಳು ಮಾತ್ರ ದೇವರಿಗೆ ಮೆಚ್ಚಿಕೆಯಾಗುವುದಿಲ್ಲ ಎನ್ನುವರು.

ನಾವು ಮೊದಲು ಸುಳ್ಳು ಹೇಳುತ್ತೇವೆ – ನಂತರ ಅದನ್ನೇ ನಿಜವೆಂದು ಸಾಧಿಸುತ್ತೇವೆ!

➡ ಹಾಗಾದರೆ – "ನಿಜವಾದ ಸುಳ್ಳು"! – "ಸುಳ್ಳಾದ ಸುಳ್ಳು"! ಇದೆ ಎಂದಾಯಿತು.

➡ ಒಂದು ಆಂಗ್ಲ ಚಿತ್ರದ ಹೆಸರು "ನಿಜವಾದ ಸುಳ್ಳು"! (“True lies”!)

ಸ್ವಲ್ಪ ಊಹಿಸಿ ನೋಡಿ!

➡ ಹೌದು! ಸುಳ್ಳು ಮತ್ತು ಸುಳ್ಳಾಡುವದು **ಜನರ ರಕ್ತದಲ್ಲಿ ಎಷ್ಟು ಬೆರೆತು ಹೋಗಿದೆ೦ತೆಂದರೆ......**

**......ಅವರು ಸಹಜವಾಗಿ ಸುಳ್ಳಾಡುತ್ತಾರೆ!**

**ನಿಜವನ್ನು ಹೇಳುವದು ಈಗ ಅತಿ......ಅತಿ ಕಷ್ಟವಾಗಿ ಬಿಟ್ಟಿದೆ!!**

ನಂತರ ಇನ್ನೊಂದು ವಿಧವಾದ ಪಾಪವನ್ನು ಪರೀಕ್ಷಿಸೋಣ –

# ಹರಟೆ / ಚಾಡಿ

**ಇದು ಇನ್ನೊಬ್ಬರ ಸ್ವಭಾವ ಅಥವಾ ನಡತೆ ಮತ್ತು ಅವರ ಕಾ೦ರ್ುಗಳನ್ನು ಬಹಿರಂಗವಾಗಿ**

**ಮಾತನಾಡುವದನ್ನು ಸೂಚಿಸುತ್ತದೆ.**

ಇನ್ನೊಬ್ಬರ ಜೀವಿತದ ಬಗ್ಗೆ, ಅವರ "ಬಲಹೀನತೆಗಳು" ಮತ್ತು ಅವರ ಕಾ೦ರ್ುಗಳನ್ನು ಕುರಿತು ಸಂಭಾಷಿಸುವದು ಒಂದು "ಹಾಸ್ಯ" ವಾಗಿ ಪರಿಗಣಿಸಲಾಗಿದೆ.

➡ ಇದನ್ನು........"ಕಾಲಹರಣ" ಎಂದು ಕರೆ೦ುಲಾಗುತ್ತದೆ!!

ಇನ್ನೊಬ್ಬರ ಬಗ್ಗೆ ಮಾತನಾಡುವಾಗ ಆ ಹರಟೆಗಾರ/ಚಾಡಿಕೋರರಿಗೆ ಸರಿಯೆಂದು ತೋರುತ್ತದೆ ಅದೇ ತಮ್ಮ ಬಗ್ಗೆ ಮಾತನಾಡುವಾಗ ಅದನ್ನು **ಸಹಿಸಿಕೊಳ್ಳಲಾರನು(ಳು).**

ಈ ಗಂಭೀರವಾದ ನಡತೆಯನ್ನು ಹತ್ಯೆ ಮಾಡುವ ವಿಷ೦ುವನ್ನು–

ಸಲೀಸಾಗಿ ತೆಗೆದು ಕೊಳ್ಳುತ್ತಾರೆ ಮತ್ತು **ಆನಂದಕರವಾಗಿಯೂ, ಮನರಂಜನೆಯಾಗಿಯೂ** ಸಹ ಈ ದಿನ ತೆಗೆದುಕೊಳ್ಳುತ್ತಾರೆ!

ನಂತರ ಇನ್ನೊಂದು ದೊಡ್ಡ ಪಾಪವನ್ನು ಪರಿಶೀಲಿಸೋಣ–

# ಸ್ವಾರ್ಥತೆ

ಇದು ಪ್ರತಿದಿನ ಜೀವಿತದ ಸನ್ನಿವೇಶದಲ್ಲಿ "ತನ್ನನ್ನೇ" **ಹೆಚ್ಚಿಸಿಕೊಳ್ಳುವದು, ತನ್ನನ್ನೇ ಕುರಿತು ಯೋಚಿಸುವದು**

ಮತ್ತು ನಡೆದುಕೊಳ್ಳುವ ಸ್ಥಿತಿಯನ್ನು ಕುರಿತು ಸೂಚಿಸುತ್ತದೆ.

ಕೆಳಗೆ ಕೊಟ್ಟಿರುವ ಸ್ಥಳಗಳಲ್ಲಿ ಪ್ರತಿದಿನ ಜೀವಿತದ ಸನ್ನಿವೇಶದಲ್ಲಿ ಇದನ್ನು ಕಾಣಬಹುದು–

.....ಮನೆಯಲ್ಲಿ ಮತ್ತು ಕುಟುಂಬದಲ್ಲಿ.....ಮನೆಯ ವಸ್ತುಗಳನ್ನು ಉಪಯೋಗಿಸುವ ವಿಷಯದಲ್ಲಿ
ಮತ್ತು.......ಮನೆಯ ಕೆಲಸದ ವಿಷಯದಲ್ಲಿ ಇತರೆ,

ಬಸ್ಸು, ರೈಲು, ಮತ್ತು ವಿಮಾನಗಳಲ್ಲಿ......ಕುಳಿತುಕೊಳ್ಳುವ ಜಾಗಕ್ಕಾಗಿ ಮತ್ತು.....ಅಲ್ಲಿ ಒದಗಿಸುವ ಸೌಲಭ್ಯಗಳಿಗಾಗಿ ಇತರೆ.

ಶಾಲೆಗಳಲ್ಲಿ........ಶಾಲಾ ಮಕ್ಕಳಲ್ಲಿ–ತರಗತಿಯಲ್ಲಿ ಮತ್ತು ಆಟದ ಮೈದಾನದಲ್ಲಿ.

**ವ್ಯಾಪಾರ**ಗಳಲ್ಲಿ, ಅನುದಿನದ ವ್ಯವಹಾರ ಮತ್ತು ಮಾಡುವ ವಿವಿಧ ಕೆಲಸಗಳಲ್ಲಿ.

ನಾಯಕರುಗಳು ಹಾಗೂ ರಾಜಕೀಯ ವ್ಯಕ್ತಿಗಳಲ್ಲಿ ಮತ್ತು ಎರಡು ರಾಜ್ಯಗಳ ಮಧ್ಯದಲ್ಲಿ ಇರುವ ನೀರು ಮತ್ತು ಭೂಮಿಯ ವಿವಾದಗಳಲ್ಲಿ ಇತ್ಯಾದಿ

ಹೌದು! ಲೋಕದಲ್ಲಿ ಅಧಿಕವಾದ ತೊಂದರೆಗಳು ಮತ್ತು ಗೊಂದಲಗಳು ಬರುವದಕ್ಕೆ ಮೂಲಕಾರಣವು.....ಸ್ವಾರ್ಥತೆ.


**ಮತ್ತು ಹೀಗೆ ಪಾಪಗಳ ಪಟ್ಟಿಯನ್ನು ಹೇಳುತ್ತಲೇ ಹೋಗಬಹುದು.......**

**ಈ ಲೋಕದ ಅನೇಕ ಜನರು ಇದೇ ಅಗಲವಾದ ದಾರಿಯಲ್ಲಿ ಅಥವಾ "ಮಾರ್ಗ"ದಲ್ಲಿ ಪ್ರಯಾಣ ಮಾಡುತ್ತಿದ್ದಾರೆ ಮತ್ತು ಇದು ನಾಶನಕ್ಕೆ ಅಥವಾ ಮರಣಕ್ಕೆ ಕೊಂಡೊಯ್ಯುತ್ತದೆ**

ಹೌದು! ಈ **ಪಾಪದ** "ದಾರಿ"ಯ ಬಗ್ಗೆ ಯೇಸು ಹೀಗೆ ಹೇಳಿದರು –

"....ಅದರಲ್ಲಿ ಹೋಗುವವರು ಬಹು ಜನ."

ಆದ್ದರಿಂದ ಯುಗಯುಗಾಂತರಗಳ **ದೈವೀಕ ಯೋಜನೆಯ** ನಕ್ಷೆಯಲ್ಲಿ ಮನುಕುಲವು ಸಮತಲ "N" ನಿಂದ ಸಮತಲ "R" ಗೆ "ಇಳಿದಿರುವುದನ್ನು" ನೋಡುತ್ತೇವೆ.




ಇಡೀ ಲೋಕದವರನ್ನು **ಮೊದಲನೆಯ** ಮತ್ತು **ಎರಡನೆಯ** ಲೋಕಗಳಲ್ಲಿ ಸಮತಲ "R"ನಲ್ಲಿ ತೋರಿಸಲಾಗಿದೆ.

ಯೆಹೂದ್ಯ ಯುಗದ ಇಸ್ರಾಯೇಲರನ್ನು ಸಮತಲ "P" ಯಲ್ಲಿ ತೋರಿಸಲಾಗಿದೆ ಮತ್ತು ಇದು ಸಮತಲ "N"ನ ಹತ್ತಿರವಿರುವದನ್ನು ನೋಡಬಹುದು.

ಆದರೆ "N"ನ ಕೆಳಗೆ ಕೊಡಲ್ಪಟ್ಟಿರುವುದು....

ವಾರ್ಷಿಕ ದೋಷಪರಿಹಾರಕ ದಿನದ ಯಜ್ಞದ ಮೂಲಕ ವಿಶಿಷ್ಟ ತಾತ್ಕಾಲಿಕ ನೀತಿವಂತರೆಂಬ ನಿರ್ಣಯವನ್ನು ಪಡೆದುಕೊಂಡಿರುವ ಇಸ್ರಾಯೇಲರ ವಿಶೇಷ ಸ್ಥಿತಿಯನ್ನು ಸೂಚಿಸುತ್ತದೆ. (0ಯಾಜಕಕಾಂಡ 16:29–30)

ನಂತರ ದೇವರು ಇಸ್ರಾಯೇಲರಿಗೆ ನ್ಯಾಯಪ್ರಮಾಣವನ್ನು ಕೊಟ್ಟರು ಮತ್ತು ಅದರಲ್ಲಿ ಒಂದು ವಾಗ್ದಾನವಿತ್ತು ಅದನ್ನು ಕೆಳಗಿನ ವಾಕ್ಯದಲ್ಲಿ ನೋಡುತ್ತೇವೆ.

**ಗಲಾತ್ಯದವರಿಗೆ 3:12**

**“ ನ್ಯಾಯಪ್ರಮಾಣವಕ್ಕೆ ನಂಬಿಕೆಯು ಆಧಾರವಲ್ಲ. ಆದರೆ – ಅದರ ಕ್ರಿಯೆಗಳನ್ನು ಮಾಡುವವನೇ ಅದರ ಮೂಲಕ ಬದುಕುವನು ”**

ಹೌದು! ದೇವರು ಇಸ್ರಾಯೇಲ್ಯರಿಗೆ ಮೋಶೆ0ಯ ಮುಖಾಂತರ **ನ್ಯಾಯಪ್ರಮಾನವನ್ನು** ಜೀವಕ್ಕೆ "ದಾರಿ" 0ಯಾಗಿ ಕೊಟ್ಟನು ಆದರೆ........ಒಬ್ಬರೂ ಸಹ ಅದನ್ನ (ಜೀವವನ್ನು) ಪಡೆದುಕೊಳ್ಳಲಾಗಲಿಲ್ಲ. ಏಕೆಂದರೆ ದೇವರ **ಪರಿಪೂರ್ಣವಾದ ನೇಮ** ನಿಷ್ಠೆಗಳನ್ನು ಬಿದ್ದುಹೋದ ಮತ್ತು ಅಪೂರ್ಣನಾದ ಮನುಷ್ಯರಿಗೆ ಎಂದಿಗೂ ಅನುಸರಿಸಲಾಗಲಿಲ್ಲ –

**(ಗಲಾತ್ಯದವರಿಗೆ 2:16) ಆದ್ದರಿಂದ ಎಲ್ಲಾ ಇಸ್ರಾ0ಯೇಲ್ಯರೂ ಸಹ ಮರಣವನ್ನು ಹೊಂದಿದರು**

ಇದುವೇ "ನಾಶನಕ್ಕೆ" ಅಥವಾ ಮರಣಕ್ಕೆ ಕೊಂಡೊಯ್ಯುವ **ಅಗಲವಾದ ದಾರಿಯಾಗಿದೆ** ಮತ್ತು 0ಯೇಸು ಬರುವವರೆಗೂ ಲೋಕಕ್ಕೆ ಮತ್ತು.....ಇಸ್ರಾಯೇಲ್ಯರಿಗೆ.........ಇದೊಂದೇ ದಾರಿ ತೆಗೆದಿತ್ತು.

**ಹೌದು! ಆದಾಮನಿಂದ ಯೇಸುವಿನ ಮೊದಲ ಬರುವಿಕೆವರೆಗೂ ಒಂದೇ ಒಂದು ದಾರಿಎಲ್ಲರಿಗೂ ತೆರೆದ್ದದ್ದು ಯಾವುದೆಂದರೆ ಅಗಲವಾದ ದಾರಿ!**

## ಎರಡನೆಯ ದಾರಿ

# ಬಿಕ್ಕಟ್ಟಾದ ದಾರಿ

ನಂತರ **0ಯೇಸುವಿನ** ಮರಣದಿಂದ **ಒಂದು ಹೊಸ ದಾರಿ** ತೆರೆ0ಯಲ್ಪಟ್ಟಿತು–

ಇದರ ಬಗ್ಗೆ ಕೆಳಗಿನ ವಾಕ್ಯದಲ್ಲಿ ಓದೋಣ-

**ಇಬ್ರಿಯರಿಗೆ 10:19-20**

**"ಹೀಗಿರುವಲ್ಲಿ ಸಹೋದರರೇ, ಯೇಸು ನಮಗೋಸ್ಕರ ಪ್ರತಿಷ್ಠಿಸಿದ ಜೀವವುಳ್ಳ ಹೊಸದಾರಿಯಲ್ಲಿ ಆತನ ರಕ್ತದ ಮೂಲಕ ಆತನ ಶರೀರವೆಂಬ ತೆರೆಯ ಮೂಖಾಂತರ ದೇವರ ಸಮುಕ್ಷಮದಲ್ಲಿ ಪ್ರವೇಶಿಸುವದಕ್ಕೆ ನಮಗೆ ಧೈರ್ಯವುಂಟಾಯಿತು."**

ಹೌದು! ಯೇಸು ತನ್ನ ಶಿಲುಬೆಯ ಮರಣದ ಮೂಲಕ

"ಒಂದು ಜೀವವುಳ್ಳ ಹೊಸದಾರಿ"ಯನ್ನು ತೆರೆದನು –

**.....ಜೀವವುಳ್ಳ ದಾರಿ!!!**

ಇದನ್ನು ಕುರಿತು ಕೆಳಗಿನ ವಾಕ್ಯದಲ್ಲಿ ಓದೋಣ.

**ಮತ್ತಾಯ 7:14**

**"ನಿತ್ಯಜೀವಕ್ಕೆ ಹೋಗುವ ಬಾಗಲು ಇಕ್ಕಟ್ಟು, ದಾರಿ ಬಿಕ್ಕಟ್ಟು; ಅದನ್ನು ಕಂಡುಹಿಡಿಯುವವರು ಸ್ವಲ್ಪ ಜನ"**

ಹೌದು! ಇದುವೇ ಆ ಹೊಸ ದಾರಿ ಮತ್ತು ಇದು....... "ನಿತ್ಯ ಜೀವಕ್ಕೆ" ಕೊಂಡೊಯ್ಯುತ್ತದೆ ಮತ್ತು ಯೇಸು ಈ ಹೊಸ ದಾರಿಯಲ್ಲಿ ಹೋಗಲು ಸಲಹೆ ಕೊಡುತ್ತಾನೆಂದು ಮುಂದಿನ ವಾಕ್ಯದಲ್ಲಿ ಸ್ಪಷ್ಟವಾಗಿ ಓದುತ್ತೇವೆ–

**ಮತ್ತಾಯ 7:14 -"ಇಕ್ಕಟ್ಟಾದ ಬಾಗಿಲಿನಿಂದ ಒಳಕ್ಕೆ ಹೋಗಿರಿ"**



## ನಿತ್ಯಜೀವಕ್ಕೆ ಹೋಗುವ ಚಿಕ್ಕಟ್ಟಾದ ದಾರಿ ಮತ್ತು ಇಕ್ಕಟ್ಟಾದ ಬಾಗಿಲು (ಚಿಕ್ಕದಾದ ಮತ್ತು ಅಗಲ ಕಡಿಮೆಯಾದ) ಇದೇ.

**ಇದರ ಅರ್ಥವೇನು? ಈ ದಾರಿ ಯಾವುದು?**

**ಮತ್ತು ಈ 'ನಿತ್ಯಜೀವವು' ಎಲ್ಲಿಗೆ ಕೊಂಡೊಯ್ಯುತ್ತದೆ?**

ಯೇಸುವಿನ ಮರಣದ ಸಮಯದಲ್ಲಿ ದೇವಾಲಯದ ಅತಿ ಪರಿಶುದ್ಧ ಸ್ಥಳಕ್ಕೆ ನಡೆಸುವ ತೆರೆಯು ಹರಿಯಲ್ಪಟ್ಟದ್ದು ಆ ಚಿಕ್ಕಟ್ಟಾದ ದಾರಿ ತೆರೆಯಲ್ಪಟ್ಟಿರುವದಕ್ಕೆ ಸೂಚನೆಯಾಗಿದೆ.

ಇದನ್ನು ಕುರಿತು ಕೆಳಗಿನ ವಾಕ್ಯಗಳಲ್ಲಿ ಓದುತ್ತೇವೆ–

**ಮತ್ತಾಯ 27:51, ಲೂಕ 23:45, ಮಾರ್ಕ 15:38**

"ಆಗ ಇಗೋ ದೇವಾಲಯದ ತೆರೆಯು ಮೇಲಿಂದ ಕೆಳಗಿನವರೆಗೂ ಹರಿದು ಎರಡು ಭಾಗವಾಯಿತು;
ಭೂಮಿಯು ಅದರಿತು; ಬಂಡೆಗಳು ಸೀಳಿಹೋದವು;"

"ಆಗಲಿಂದ ಸೂರ್ಯನು ಕಾಂತಿಗುಂದಿ ಮೂರು ಘಂಟೆಯ ತನಕ ಆ ದೇಶದ ಮೇಲೆಲ್ಲಾ ಕತ್ತಲೆಕವಿಯಿತು; ಇದಲ್ಲದೆ ದೇವಾಲಯದ ತೆರೆಯು ನಡುವೆ ಹರಿದು ಹೋಯಿತು."

"ಆಗ ದೇವಾಲಯದ ತೆರೆಯು ಮೇಲಿಂದ ಕೆಳಗಿನವರೆಗೂ ಹರಿದು ಎರಡು ಭಾಗವಾಯಿತು."



**ಹೌದು! ಈ ದಾರಿಯನ್ನು ತೆರೆಯಲು ಎಂತಹ ಭವ್ಯವಾದ ಸಂಕೇತ!**

ಆ ತೆರೆಯು ಎಷ್ಟು ಭಾರ ಮತ್ತು ದಪ್ಪವಾಗಿತ್ತೆಂದರೆ ವರ್ಷಕ್ಕೊಮ್ಮೆ ಪ್ರವೇಶಿಸುವ ಮಹಾಯಾಜಕನಿಗೆ ಅದನ್ನು ಎತ್ತಲು ಸಹ ಆಗುತ್ತಿರಲಿಲ್ಲ!

ಆತನು ಅದರ ಕೆಳಗೆ ತೆವಳ ಬೇಕಾಗಿತ್ತು!

ಮತ್ತು ಅಷ್ಟು ದಪ್ಪವಾದ ತೆರೆಯು ತನಗೆ ತಾನೇ ಹರಿಯುವದನ್ನು ಊಹಿಸಿ ನೋಡಿ!

**ಇದೊಂದು ಮಹಾ ಅದ್ಭುತವಾಗಿತ್ತು**

ಮತ್ತು ಈ ತೆರೆಯು ಹರಿಯುವದರ **ಮೊದಲ ಸಂಕೇತವನ್ನು** ಈಗ ಅರ್ಥಮಾಡಿಕೊಳ್ಳೋಣ –

**ಇಬ್ರಿಯರಿಗೆ 9:2-8**

"ಅದು ಇಹಲೋಕಸಂಬಂಧವಾದದ್ದು. ಅಂದರೆ ಒಂದು ಗುಡಾರವು ಕಟ್ಟಲ್ಪಟ್ಟಿತು; ಅದರ ಮೊದಲನೆಯ ಭಾಗದಲ್ಲಿ ದೀಪಸ್ತಂಭ, ಮೇಜು, ಸಮರ್ಪಿಸಿದ ರೊಟ್ಟಿ ಇವುಗಳಿದ್ದವು; ಅದಕ್ಕೆ ಪವಿತ್ರಸ್ಥಾನ ಎಂದು ಹೆಸರು. ಎರಡನೆಯ ತೆರೆಯ ಆಚೆಯಲ್ಲಿ ಅತಿಪವಿತ್ರಸ್ಥಾನವೆನಿಸಿಕೊಳ್ಳುವ ಇನ್ನೊಂದು ಭಾಗವಿತ್ತು; ಅದರಲ್ಲಿ ಚಿನ್ನದ ಧೂಪಾರತಿ, ಒಳಗೂ ಹೊರಗೂ ಚಿನ್ನದ ತಗಡನ್ನು ಮುಡಾಯಿಸಿದ್ದ ಒಡಂಬಡಿಕೆಯ ಮಂಜೂಷ ಇವುಗಳಿದ್ದವು; ಆ ಮಂಜೂಷದೊಳಗೆ ಮನ್ನಾ ಇಟ್ಟಿದ್ದ ಚಿನ್ನದ ಪಾತ್ರೆಯೂ ಆರೋನನ ಚಿಗುರಿದ ಕೋಲೂ ಒಡಂಬಡಿಕೆ ಬರೆದಿದ್ದ ಕಲ್ಲಿನ ಹಲಿಗೆಗಳೂ ಇದ್ದವು; ಅದರ ಮೇಲೆ ದೇವರ ಪ್ರಭಾವವನ್ನು ಸೂಚಿಸುವ ಕೆರೂಬಿಗಳು ಕೃಪಾಸನವನ್ನು ಆಚ್ಛಾದಿಸಿಕೊಂಡಿದ್ದವು. ಸದ್ಯಕ್ಕೆ ಈ ವಿಷಯಗಳನ್ನು ಒಂದೊಂದಾಗಿ ವಿವರಿಸುವದಕ್ಕೆ ಆಗುವದಿಲ್ಲ. ಇವುಗಳು ಹೀಗೆ ಸಿದ್ಧಮಾಡಲ್ಪಟ್ಟ ಮೇಲೆ ಯಾಜಕರು ಯಾವಾಗಲೂ ಗುಡಾರದ ಮುಂದಣ ಭಾಗದೊಳಗೆ ಹೋಗಿ ದೇವಾರಾಧನೆಯನ್ನು ನಡಿಸುತ್ತಾರೆ. ಆದರೆ ಎರಡನೆಯ ಭಾಗದೊಳಗೆ ಮಹಾಯಾಜಕನೊಬ್ಬನೇ ವರುಷಕ್ಕೆ ಒಂದೇ ಸಾರಿ ಹೋಗುತ್ತಾನೆ, ಅವನು ರಕ್ತವನ್ನು ತಕ್ಕೊಳ್ಳದೆ ಹೋಗುವದಿಲ್ಲ; ಆ ರಕ್ತವನ್ನು ತನಗೋಸ್ಕರವೂ ಜನರ ತಪ್ಪುಗಳಿಗೋಸ್ಕರವೂ ಸಮರ್ಪಿಸುತ್ತಾನೆ. ಈ ಏರ್ಪಾಟಿನಿಂದ ಗುಡಾರದಲ್ಲಿ ಮುಂದಣ ಭಾಗವು ಇರುವ ತನಕ ದೇವರ ಸಮಕ್ಷಮಕ್ಕೆ ಹೋಗುವ ಮಾರ್ಗವು ಇದುವರೆಗೂ ಪ್ರಕಟವಾಗಲಿಲ್ಲವೆಂಬದನ್ನು ಪವಿತ್ರಾತ್ಮನು ವ್ಯಕ್ತಪಡಿಸುತ್ತಾನೆ "

ಮೋಶೆಯು ದೇವರ ಗುಡಾರವನ್ನು ಕಟ್ಟಲು ಆದೇಶ ಹೊಂದಿದನು.

(**ವಿಮೋಚನಕಾಂಡ** 25:9) ಗುಡಾರದ

ಒಳಕೋಣೆಯನ್ನು......"ಅತಿ ಪವಿತ್ರ ಸ್ಥಳ" ಎನ್ನಲಾಗುತ್ತಿತ್ತು ಮತ್ತು

ಇದು.....ಪರಲೋಕ ಮತ್ತು ದೇವರ ಸನ್ನಿಧಿಯನ್ನು ಸೂಚಿಸುತ್ತದೆ.

......ಶೆಕೀನಾ ಬೆಳಕು ದೇವರ ಪ್ರಸನ್ನತೆಯನ್ನು ಸೂಚಿಸುತ್ತದೆ.

**(ಈ ಗುಡಾರದ ವಿವರವನ್ನು 31ನೇ ತರಗತಿಯಲ್ಲಿ ವಿವರವಾಗಿ ನೋಡುತ್ತೇವೆ)**

**ಆದ್ದರಿಂದ ಯೇಸು ತೆರೆದ ಆ "ದಾರಿ"ಯು ಇದುವೇ**
**→ ಆ ದಾರಿಯು.....ಪರಲೋಕಕ್ಕೆ ಕೊಂಡೊಯ್ಯುತ್ತದೆ!!**

ಹೌದು! ಇದೊಂದು ರಕ್ಷಣೆಯೆಂದು ಕೆಳಗಿನ ವಾಕ್ಯದಲ್ಲಿ ಓದುತ್ತೇವೆ–

**ಇಬ್ರಿಯರಿಗೆ 2:3,4**

"ಈ ಅತ್ಯಂತ ವಿಶೇಷ ರಕ್ಷಣೆಯನ್ನು ನಾವು ಅಲಕ್ಷ್ಯಮಾಡಿದರೆ ತಪ್ಪಿಸಿಕೊಳ್ಳುವದು ಹೇಗೆ? ಇದು ಕರ್ತನಿಂದ ಮೊದಲು ಹೇಳಲ್ಪಟ್ಟಿತು; ಆತನಿಂದ ಕೇಳಿದವರು ಇದನ್ನು ನಮಗೆ ಸ್ಥಿರಪಡಿಸಿದರು; ಮತ್ತು ದೇವರು ಅವರ ಕೈಯಿಂದ ಸೂಚಕಕಾರ್ಯಗಳನ್ನೂ ಅದ್ಭುತ ಕಾರ್ಯಗಳನ್ನೂ ನಾನಾ ವಿಧವಾದ ಮಹತ್ಕಾರ್ಯಗಳನ್ನು ನಡಿಸಿ ಪವಿತ್ರಾತ್ಮವರಗಳನ್ನು ತನ್ನ ಚಿತ್ತಾನುಸಾರವಾಗಿ ಅವರಿಗೆ ಅನುಗ್ರಹಿಸಿ ಅವರ ಮಾತಿಗೆ ಸಾಕ್ಷಿಕೊಡುತ್ತಿದ್ದನು."

ಈ "ದಾರಿ"ಯನ್ನು ..... "ಅತ್ಯಂತ ವಿಶೇಷ ರಕ್ಷಣೆ" ಎಂದೂ ಸಹ ಕರೆಯಲಾಗುತ್ತದೆ ಮತ್ತು ಇದು ಪರಲೋಕದ ರಕ್ಷಣೆಯೆಂದು ಅಪೊ. ಪೌಲನು ಹೇಳುವದನ್ನು ಕೆಳಗಿನ ವಾಕ್ಯದಲ್ಲಿ ನೋಡುತ್ತೇವೆ–

**ಫಿಲಿಪ್ಪಿಯರಿಗೆ 3:14** –"ದೇವರು ಕ್ರಿಸ್ತನ ಮೂಲಕವಾಗಿ ನಮ್ಮನ್ನು ಮೇಲಕ್ಕೆ ಕರೆದು ನಮ್ಮ ಮುಂದೆ ಇಟ್ಟಿರುವ ಬಿರುದನ್ನು ಗುರಿಮಾಡಿಕೊಂಡು ಓಡುತ್ತಾ ಇದ್ದೇನೆ."

**ಹಾಗಾದರೆ ಈ "ಜೀವ"ವೆಂಬ ಇಕ್ಕಟ್ಟಾದ ದಾರಿ ಎಂದರೇನು?**

ಇದನ್ನು ಕುರಿತು ಹೀಗೆ ಓದುತ್ತೇವೆ –

**ರೋಮಾಪುರದವರಿಗೆ 2:7**

"ಯಾರು ಪ್ರಭಾವ ಮಾನ ನಿರ್ಲಯತ್ವಗಳನ್ನು ಹೊಂದಬೇಕೆಂದು ಒಳ್ಳೇದನ್ನು ಬೇಸರಗೊಳ್ಳದೆ ಮಾಡುತ್ತಾರೋ ಅವರಿಗೆ ನಿತ್ಯಜೀವವನ್ನು ಕೊಡುವನು."

ಹೌದು! ಇಲ್ಲಿ ಅನುಗ್ರಹಿಸುವ ಜೀವ ಯಾವುದೆಂದರೆ "ನಿರ್ಲಯತ್ವ"ವೆಂದು ಓದುತ್ತೇವೆ.

ಇದರ ಅರ್ಥವೇನು? ನಿರ್ಲಯತ್ವವೆಂದರೇನು?

ಅನೇಕರಿಗೆ ನಿರ್ಲಯತ್ವದ ಬಗ್ಗೆ ಸ್ಪಷ್ಟವಾದ ಅರಿವು ಇಲ್ಲ.

ಮೂಲತಃ ಎಲ್ಲಾ ಮನುಷ್ಯರು ನಿರ್ಲಯತ್ವವುಳ್ಳವರೆಂದು ಅವರ ಆತ್ಮಗಳು ಸಾಯುಲು ಸಾಧ್ಯವಿಲ್ಲ ಅಂದುಕೊಂಡಿದ್ದಾರೆ.

**ಸತ್ಯವೇದವು ಹೀಗೆ ಬೋಧಿಸುತ್ತದೆಯೇ?**

ಈ ವಿಷಯವನ್ನು ಕುರಿತು ಅಭ್ಯಾಸ ಮಾಡೋಣ.....

**1 ತಿಮೊಥೆಯನಿಗೆ 6:16**

**"......ತಾನೊಬ್ಬನೇ ಅಮರತ್ವವುಳ್ಳವನೂ ಅಗಮ್ಯವಾದ ಬೆಳಕಿನಲ್ಲಿ ವಾಸಮಾಡುವವನೂ ಆಗಿದ್ದಾನೆ....."**

ಯಾರು ಈ "ತಾನೊಬ್ಬನೇ ಅಮರತ್ವವುಳ್ಳವನೂ"?

ಇದು ಯೇಸುವಾಗಿರುವದಕ್ಕೆ ಸಾಧ್ಯವಿಲ್ಲ ಏಕೆಂದರೆ ನಾವು ಹೀಗೆ ಓದುತ್ತೇವೆ –

**" ಮನುಷ್ಯರಲ್ಲಿ ಯಾರೂ ಆತನನ್ನು ಕಾಣಲಿಲ್ಲ, ಯಾರೂ ಕಾಣಲಾರರು "**

ಹೌದು! ಇವರು **ಪರಲೋಕದಲ್ಲಿರುವ ತಂದೆ!**

ಹೌದು! ಆರಂಭದಿಂದ "ಆತನೊಬ್ಬನೇ" ಅಮರತ್ವವುಳ್ಳವನೆಂದು ಸತ್ಯವೆದವು ನಮಗೆ ಬೋಧಿಸುತ್ತದೆ.

**ಎಲ್ಲಾ ಸೃಷ್ಟಿಗಳು ಲಯಾವಸ್ಥೆಯಲ್ಲಿ ಉಂಟುಮಾಡಲ್ಪಟ್ಟವು ಪರಲೋಕದಲ್ಲಿ ಲಯಾವಸ್ಥೆಯಲ್ಲಿರುವ ಆತ್ಮಗಳಿವೆ ಹಾಗೂ ಆದಾಮನು ಲಯಾವಸ್ಥೆಯಲ್ಲಿ ಸೃಷ್ಟಿಮಾಡಲ್ಪಟ್ಟ ಮನುಷ್ಯನು.**

ಲಯಾವಸ್ಥೆ ಎಂದರೆ ಅವರಲ್ಲಿ ಜೀವವಿರುತ್ತದೆ ಆದರೆ.........ಸಾಯುತ್ತಾರೆ!

ನಿರ್ಲಯತ್ವವುಳ್ಳವರು ಎಂದಿಗೂ ಸಾಯುವುದಿಲ್ಲ!

**ನಿರ್ಲಯತ್ವ ಎಂದರೆ ಸಾವು ಬರುವದಕ್ಕೆ ಸಾಧ್ಯಾವೇ ಇಲ್ಲದ ಸ್ಥಿತಿ!**

ಮತ್ತು ಮನುಷ್ಯ ಜಾತಿಯ ಸ್ಥಿತಿಯೇನು?
ಮುಂದಿನ ವಾಕ್ಯದಲ್ಲಿ ಓದೋಣ–

**ಲೂಕ 9:60**

**" ಯೇಸು ಅವರಿಗೆ – ಸತ್ತವರೇ ತಮ್ಮವರಲ್ಲಿ ಸತ್ತು ಹೋದವರ ಉತ್ತರ ಕ್ರಿಯೆಗಳನ್ನು ಮಾಡಲಿ ಅಂದನು "**

ಹೌದು! ಆದಾಮನ ಎಲ್ಲಾ ಮಕ್ಕಳನ್ನು ಲಯಾವಸ್ಥೆಯಲ್ಲಿ ಇರುವವರೆಂದೂ ಸಹ ಹೇಳದೆ....."ಸತ್ತವರು" ಎಂದು ಹೇಳಲಾಗಿದೆ ಏಕೆಂದರೆ ಏದೆನ್ ತೋಟದಲ್ಲಿ ಆದಾಮನು ಪಾಪದಲ್ಲಿ ಬಿದ್ದುಹೋದ ನಂತರ.....ಎಲ್ಲರೂ **ಸಾಯುವದಕ್ಕಾಗಿಯೇ** ಹುಟ್ಟಿದರು, **ಬದುಕಲು ಯಾವ ಹಕ್ಕು ಇಲ್ಲವೇ ಇಲ್ಲ ! ಲಯತ್ವವುಳ್ಳ ಜೀವಿಗಳಿಗೆ ಬದುಕಲು ಹಕ್ಕಿದೆ--**

ಉದಾ: ಪರಲೋಕದ ದೂತರು.

ಮತ್ತು ಯೇಸುವನ್ನು ಕುರಿತು ಏನು? ಆತನ ಬಗ್ಗೆ ಮುಂದಿನ ವಾಕ್ಯದಲ್ಲಿ ಓದೋಣ –

**ಪ್ರಕಟನೆ 1:18**

**"ಸತ್ತವನಾದೆನು, ಮತ್ತು ಇಗೋ ಯುಗಯುಗಾಂತರಗಳಲ್ಲಿಯೂ ಬದುಕುವವನಾಗಿದ್ದೇನೆ; ಮರಣದ ಮತ್ತು ಪಾತಾಳದ ಬೀಗದ ಕೈಗಳು ನನ್ನಲ್ಲಿ ಅವೆ."**

ಹೌದು! ಯೇಸುವು ಸಹ ಲಯಾವಸ್ಥೆಯಲ್ಲಿದ್ದು ಪರಿಪೂರ್ಣ ಮನುಷ್ಯನಾಗಿ ಶಿಲುಬೆಯಲ್ಲಿ **ಸತ್ತನೆಂದು** ಮುಂದಿನ ವಾಕ್ಯದಲ್ಲಿ ಓದುತ್ತೇವೆ

**ಮತ್ತಾಯ 27:50**

**"ಯೇಸು ತಿರಿಗಿ ಮಹಾ ಧ್ವನಿಯಿಂದ ಕೂಗಿ ಪ್ರಾಣ ಬಿಟ್ಟನು"**



ಗಮನಿಸಿ: "ಸತ್ತವನಾದೆನು" (**ಪ್ರಕಟನೆ** 1:18)

ಆದರೆ ಮೂರನೇ ದಿನದ ನಂತರ ಯೇಸುವೂ ಸ್ವತ: ಜೀವವುಳ್ಳವನಾಗಿರುವಂತೆ ಮಾಡಲ್ಪಟ್ಟನು.

(**ಯೋಹಾನ** 5:26 - **"........ಮಗನೂ ಸ್ವತಃ ಜೀವವುಳ್ಳವನಾಗಿರುವಂತೆ ಮಾಡಿದನು"**)

ತಂದೆಯು ನಿರ್ಲಯತ್ವದಲ್ಲಿರುವಂತೆ.......

ಈಗ ಮಗನೂ ನಿರ್ಲಯತ್ವದಲ್ಲಿದ್ದಾನೆಂದು ಕೆಳಗಿನ ವಾಕ್ಯದಲ್ಲಿ ಓದುತ್ತೇವೆ –

ಪ್ರಕಟನೆ 1:18 **"......ಇಗೋ ಯುಗಯುಗಾಂತರಗಳಲ್ಲಿಯೂ ಬದುಕುವವನಾಗಿದ್ದೇನೆ!"**

ಇದನ್ನು ಅರ್ಥಮಾಡಿಕೊಂಡ ಮೇಲೆ ಒಂದು ಮುಖ್ಯವಾದ ವಿಷಯವನ್ನು ಓದೋಣ –

## 2 ಪೇತ್ರ 1:4

"ನೀವು ಲೋಕದಲ್ಲಿ ದುರಾಶೆಯಿಂದುಂಟಾದ ಕೆಟ್ಟತನಕ್ಕೆ ತಪ್ಪಿಸಿಕೊಂಡು ದೈವಸ್ವಭಾವದಲ್ಲಿ ಪಾಲನ್ನು ಹೊಂದುವವರಾಗಬೇಕೆಂಬ ಉದ್ದೇಶದಿಂದ ದೇವರು ತನ್ನ ಪ್ರಭಾವಗುಣಾತಿಶಯಗಳಿಂದ ಅಮೂಲ್ಯವಾಗಿಯೂ ಉತ್ಕೃಷ್ಟವಾಗಿಯೂ ಇರುವ ವಾಗ್ದಾನಗಳನ್ನು ನಮಗೆ ದಯಪಾಲಿಸಿದ್ದಾನೆ."

ಹೌದು! ಯೇಸುವಿನ ಹಿಂಬಾಲಕರಿಗೆ **ಈ** ಸುವಾರ್ತಾ ಯುಗದಲ್ಲಿ **ದೈವ ಸ್ವಭಾವದ ನಿರ್ಲಯತ್ವವನ್ನು** ಈ "ಜೀವಿತ"ದಲ್ಲೇ ವಾಗ್ದಾನ ಮಾಡಲಾಗಿದೆ!

## ಇದನ್ನು ಕೇಳಲು........ನಂಬಲು ಅಸಾಧ್ಯವಾಗಿದೆ!

ಆದರೆ ಮುಂದಿನ ಬೇರೆ ವಾಕ್ಯಗಳನ್ನು ಓದಿ ಧೃಡಪಡಿಸಿಕೊಳ್ಳೋಣ –

## 1 ಕೊರಿಂಥದವರಿಗೆ 15:53, ಪ್ರಕಟನೆ 20:6

"ಲಯವಾಗುವ ಈ ದೇಹವು ನಿರ್ಲಯತ್ವವನ್ನು ಧರಿಸಿಕೊಂಡಾಗ ಮರಣಾಧೀನವಾಗಿರುವ ಈ ದೇಹವು ಅಮರತ್ವವನ್ನು ಧರಿಸಿಕೊಂಡಾಗ ಬರೆದಿರುವ ಮಾತು ನೆರವೇರುವದು."

"ಪ್ರಥಮ ಪುನರುತ್ಥಾನದಲ್ಲಿ ಸೇರಿರುವವನು ಧನ್ಯನೂ ಪರಿಶುದ್ಧನೂ ಆಗಿದ್ದಾನೆ. ಇಂಥವರ ಮೇಲೆ ಎರಡನೆಯ ಮರಣಕ್ಕೆ ಅಧಿಕಾರವಿಲ್ಲ;ಆದರೆ ಅವರು ದೇವರಿಗೂ ಕ್ರಿಸ್ತನಿಗೂ ಯಾಜಕರಾಗಿ ಕ್ರಿಸ್ತನೊಂದಿಗೆ ಆ ಸಾವಿರ ವರುಷ ಆಳುವರು"

ಇಲ್ಲಿ ಮತ್ತೆ ಆ ನಿರ್ಲಯತ್ವದ ವಾಗ್ದಾನವನ್ನು ಕುರಿತು ಪ್ರಸ್ತಾಪಿಸಲಾಗಿದೆ.

➡ ಇದನ್ನು **ಪ್ರಥಮ ಪುನರುತ್ಥಾನವೆಂದು** ಕರೆಯಲಾಗಿದೆ.

ಈ ನಿರ್ಲಯತ್ವದ ವಾಗ್ದಾನವನ್ನು ಅಪ್ರೋ. ಪೌಲನು "ಕಿರೀಟ" ಅಥವಾ ಎಂದು ಹೇಳುತ್ತಾನೆ

➡ 2 **ತಿಮೊಥೆಯನಿಗೆ** 4:8 – "ಇನ್ನು ಮುಂದೆ ನನಗೋಸ್ಕರ ನೀತಿಯ ಕಿರೀಟವು ಇಡಲ್ಪಟ್ಟಿದೆ"

ಈ ವಾಗ್ದಾನವನ್ನು ಮನಸ್ಸಿನಲ್ಲಿಟ್ಟುಕೊಂಡು ಅಪ್ರೋ. ಪೌಲನು ಕ್ರೈಸ್ತರಿಗೆ ಹೀಗೆ ಬರೆಯುತ್ತಾನೆ–

## ರೋಮಾಪುರದವರಿಗೆ 12:1

"ಆದದರಿಂದ ಸಹೋದರರೇ, ದೇವರ ಕನಿಕರವನ್ನು ನಿಮ್ಮ ನೆನಪಿಗೆ ತಂದು

ನಿಮ್ಮನ್ನು ಬೇಡಿಕೊಳ್ಳುವದೇನಂದರೆ – ನೀವು ನಿಮ್ಮ ನಿಮ್ಮ ದೇಹಗಳನ್ನು ದೇವರಿಗೆ ಮೀಸಲಾಗಿಯೂ ಮೆಚ್ಚಿಗೆಯಾಗಿಯೂ ಇರುವ ಸಜೀವಯಜ್ಞವಾಗಿ ಅರ್ಪಿಸಿರಿ; ಇದೇ ನಿಮ್ಮ ವಿವೇಕಪೂರ್ವಕವಾದ ಆರಾಧನೆಯು.”

ನೋಡಿರಿ! ಇಲ್ಲಿ ಅಪ್ರೋ. ಪೌಲನು **ಸಹೋದರರಿಗೆ** (ವಿಶ್ವಾಸಿಗಳಿಗೆ) **ಬೇಡಿಕೊಳ್ಳುವುದೇನೆಂದರೆ....**“ಅವರ ದೇಹಗಳನ್ನು ಸಜೀವ- ಯಜ್ಞವಾಗಿ ಅರ್ಪಿಸಬೇಕು.”

**ಏಕೆ? ಇದರ ಅರ್ಥವೇನು?**

ಯೇಸುವಿನ ಹೆಜ್ಜೆಯ ಜಾಡನ್ನು ಹಿಂಬಾಲಿಸಲು ಬಲಿಯ ಜೀವನವಿರಬೇಕೆಂದು ಇಲ್ಲಿ ಮಾತನಾಡುತ್ತಾನೆ.

ಹೌದು! ಇದೇ ವಿಷಯವನ್ನು ಕುರಿತು ಮತ್ತೆ ಕೆಳಗಿನ ವಾಕ್ಯದಲ್ಲಿ ಸ್ಪಷ್ಟವಾಗಿ ಓದುತ್ತೇವೆ–

**ಫಿಲಿಪ್ಪಿಯವರಿಗೆ 1:29, 2 ತಿಮೊಥೆಯನಿಗೆ 2:11,12**

“ ಹೇಗಂದರೆ ಕ್ರಿಸ್ತನ ಮೇಲೆ ನಂಬಿಕೆಯಿಡುವದೂ ಆತನಿಗೋಸ್ಕರ ಬಾಧೆಯನ್ನನುಭವಿಸುವದೂ ನಿಮಗೆ ಅನುಗ್ರಹವಾಗಿ ದೊರೆಯಿತು ”

“ಈ ಮಾತು ನಂಬತಕ್ಕದ್ದಾಗಿದೆ, ಏನಂದರೆ – ನಾವು ಆತನೊಡನೆ ಸತ್ತಿದ್ದರೆ ಆತನೊಡನೆ ಜೀವಿಸುವೆವು; ಸಹಿಸಿಕೊಳ್ಳುವವರಾಗಿದ್ದರೆ ಆತನೊಡನೆ ಆಳುವೆವು;”

ಹೌದು! ಕ್ರೈಸ್ತರ ದಾರಿಯು **ಕೇವಲ ನಂಬುವುದು ಮಾತ್ರವಲ್ಲ......**

ತ್ಯಾಗದ ಮೂಲಕ ಮರಣದವರೆಗೆ ಯಜಮಾನನಾದ ಯೇಸುವನ್ನು ಹಿಂಬಾಲಿಸಬೇಕು.

ಆದರೆ ನಾವು ಓದುವುದೇನೆಂದರೆ–

**"ಕೆಲವು ಕ್ರೈಸ್ತರು ಮಾತ್ರ ಅದರಲ್ಲಿರುತ್ತಾರೆ.......**
**......ಅದನ್ನು ಕಂಡು ಹಿಡಿಯುತ್ತಾರೆ"**
**(ಈ ಮಹಾ ಸದಾವಕಾಶ ಮತ್ತು ಭಾಗ್ಯವನ್ನು ಕುರಿತು ಅರ್ಥಮಾಡಿಕೊಳ್ಳುತ್ತಾರೆ)**



ಯೇಸುವಿನ ಈ **ಬಿಕ್ಕಟ್ಟಾದ ದಾರಿಯನ್ನು** ಕುರಿತಾದ ಮತ್ತೊಂದು ವಾಕ್ಯವನ್ನು ಅನೇಕರು ಸ್ಪಷ್ಟವಾಗಿ **ಅರ್ಥಮಾಡಿಕೊಂಡಿಲ್ಲ,** ಮತ್ತು ನಿಜಾಂಶವೆಂದರೆ ಅನೇಕರು ಅದನ್ನು **ತಪ್ಪಾಗಿ ತಿಳಿದು ಕೊಂಡಿದ್ದಾರೆ!**

ಹೌದು! ಈ ವಾಕ್ಯಗಳನ್ನು ನಾವು ಕೆಳಗೆ ಓದುತ್ತೇವೆ –

**ಮತ್ತಾಯನು 19:24**

“ಐಶ್ವರ್ಯವಂತನು ದೇವರ ರಾಜ್ಯದಲ್ಲಿ ಸೇರುವದಕ್ಕಿಂತ ಒಂಟೆಯು ಸೂಜಿಯ ಕಣ್ಣಿನಲ್ಲಿ ನುಗ್ಗುವದು ಸುಲಭ ಎಂದು ನಿಮಗೆ ತಿರಿಗಿ ಹೇಳುತ್ತೇನೆ ಅಂದನು.”

ಇದೇ ರೀತಿಯ ವಾಕ್ಯಗಳನ್ನು ಕೆಳಗೆ ಓದುತ್ತೇವೆ -

**ಮಾರ್ಕ 10:25 ಮತ್ತು ಲೂಕ 18:25**

**ಇವುಗಳ ಅರ್ಥವೇನು?**

ಇದನ್ನು **ನೇರವಾದ** ಭಾಷೆಯಲ್ಲಿ **ಪರಿಗಣಿಸಿದರೆ ನಿಜಕ್ಕೂ** ಹಾಸ್ಯಾಸ್ಪದವಾಗಿ **ಕಾಣುತ್ತದೆ!**

ಆದರೆ **ವಿಮರ್ಶೆಗಾರನು** ಈ ಸತ್ಯವೇದದ ಈ ವಾಕ್ಯವನ್ನು ಮತ್ತು ಬೇರೆ ಕೆಲವು ವಾಕ್ಯಗಳನ್ನು **ಉದಾಹರಣೆಯಾಗಿಟ್ಟುಕೊಂಡು** ಯೇಸುವಿನ **ಬೋಧನೆಗಳಿಗೆ** ಯಾವ **ಆಧಾರವೂ** ಇಲ್ಲ ಮತ್ತು ಅದು **ನಿಜವಲ್ಲ** ಎನ್ನುವರು!!!

**ಹಾಗಾದರೆ ಇಲ್ಲಿ ನಿಜವಾದ ಅರ್ಥವೇನು?**


ನಾವು ನೆನಪಿನಲ್ಲಿಡಬೇಕಾದ ವಿಷಯವೇನೆಂದರೆ ಯೇಸುವಿನ ಮಾತಿನಲ್ಲಿ **ಸಾಮ್ಯರೂಪದ ಭಾಷೆಯ** ಜೊತೆಗೆ, ಆತನ **ಸುತ್ತಲೂ ಇದ್ದ** ಜಾಗ ಮತ್ತು ವಸ್ತುಗಳನ್ನು **ಗಮನಿಸಿ,** ಅವುಗಳನ್ನು **ತನ್ನ ಬೋಧನೆಗಳಲ್ಲಿ** ಹೇಳುತ್ತಿದ್ದರು.

ಇದು **ಅದಕ್ಕೆ ಒಂದು ಉದಾಹರಣೆ!**

**ಇಂತಹ** ಅನೇಕ ಉದಾಹರಣೆಗಳನ್ನು ಮುಂದಿನ ತರಗತಿಗಳಲ್ಲಿ ನೋಡಲಿದ್ದೇವೆ!

ಇಲ್ಲಿ “ಸೂಜಿಯ ಕಣ್ಣಿನಲ್ಲಿ” ಎಂಬ ಯೇಸುವಿನ ಮಾತಿಗೆ ಅರ್ಥವೇನು?

**ಇದು ಯೆರೂಸಲೇಮಿನ ಮುಖ್ಯ ಬಾಗಿಲಿನೊಳಗೆ ಇನ್ನೊಂದು ಚಿಕ್ಕ ಬಾಗಿಲಿರುವುದನ್ನು ಕುರಿತು ಯೇಸು ಹೇಳಿದರು!**



ಅಲ್ಲಿ ಏನಾಗುತ್ತಿತ್ತೆಂದರೆ **ಸೂ೦ರ್ಯಾಸ್ತಮಾದ** ನಂತರ ಮುಖ್ಯ ಬಾಗಿಲು **ಮುಚ್ಚಲಾಗುತ್ತಿತ್ತು.**

ತಡವಾಗಿ ಹಿಂದಿರುಗುತ್ತಿದ್ದ **ವ್ಯಾಪರಿಗಳು** ಮತ್ತು **ವರ್ತಕರು**

ತಮ್ಮ ಒಂಟೆಗಳಿಂದ ಕೆಳಗಿಳಿದು,

.....ನಂತರ ಅವರ ವಸ್ತು ಮತ್ತು ಸಾಮಾನುಗಳನ್ನು ಕೆಳಗಿಳಿಸಿ

.....ತಮ್ಮ ಒಂಟೆಗಳನ್ನು ಚಿಕ್ಕ ಬಾಗಿಲಿನಿಂದ ಬಗ್ಗಿಸಿ ಕರೆದೊ೦ಯ್ಯುತ್ತಿದ್ದರು.

ತಮ್ಮ ವಸ್ತುಗಳನ್ನು ತಾವೇ ಆ ಚಿಕ್ಕ ಬಾಗಿಲಿನಿಂದ ಸಾಗಿಸಿ,

ಮತ್ತು ಕೊನೆ೦ಯದಾಗಿ ಅವರ ವಸ್ತುಗಳನ್ನು ಮತ್ತೆ ಒಂಟೆ೦ಯಮೇಲಿರಿಸಿ ಮುಂದೆ ಹೋಗುತ್ತಿದ್ದರು!!

ಹೌದು! ಈ **ದಾರಿಗೆ** "ಸೂಜಿಕಣ್ಣಿನ ಬಾಗಿಲ" ಮೂಲಕ ಹೋಗುವುದೆಂದು ಹೇಳಲಾಗಿದೆ ಮತ್ತು

ಹೌದು! **ಧನವಂತನು** ಆ ಬಾಗಿಲ ಬಳಿ ಬಂದು ನಿಂತು, ಇದು **ಅಸಾಧ್ಯಾವೆಂದು** ನೆನೆಸಿರಬಹುದು.

ಆದರೆ......

**.......ಅದು ಕಷ್ಟಕರವಾಗಿದ್ದರೂ.....ಅದು ಸಾಧ್ಯವಾಗುತ್ತಿತ್ತು!**

ಅದೇ ರೀತಿ ಈ ಬಿಕ್ಕಟ್ಟಾದ ದಾರಿಯಲ್ಲಿ ಯೇಸುವನ್ನು ಹಿಂಬಾಲಿಸುವುದು ಮೊದಲಿಗೆ **ಅಸಾಧ್ಯವಾಗಿ** ಕಾಣಬಹುದು ಆದರೆ.....

**......ಇದು ಸಾಧ್ಯವಾಗುತ್ತದೆ......ಇಲ್ಲದಿದ್ದರೆ**

**ದೇವರು ಅಂತಹ ಕರೆ0ುುವಿಕೆ0ುನ್ನು 0ುಾರಿಗೂ ಕೊಡುತ್ತಿರಲಿಲ್ಲ!!**

ಈ **ವಿಶೇಷವಾದ** ಕ್ರೈಸ್ತರ ಕರೆ0ುುವಿಕೆ0ು ವಿವರಗಳನ್ನು ಮತ್ತು "ಜೀವದ ದಾರಿ"0ುನ್ನು ಅಧಿಕವಾಗಿ ಮುಂದಿನ ತರಗತಿಗಳಲ್ಲಿ ಅಭ್ಯಾಸ ಮಾಡಲಿದ್ದೇವೆ (ಅಭ್ಯಾಸ # 17, 18, &19)

**ಆದ್ದರಿಂದ, ಪ್ರಿ0ು ಸಹೋದರರೇ, ಆ ಬಿಕ್ಕಟ್ಟಾದ ದಾರಿ0ು ಮಹಾ ಮಹಿಮೆ0ುುಳ್ಳದ್ದು!**

**ಈಗ ಮೂರನೆಯ ದಾರಿ0ುನ್ನು ಕುರಿತು ನೋಡೋಣ!**

**ನಿಜವಾಗಿ0ುೂ ಮೂರನೇ ದಾರಿ ಇದೆ0ುೇ?**

**ಅದು 0ುಾವ ದಾರಿ?** ಬನ್ನಿ ಮುಂದೆ ನೋಡೋಣ –

ಇಡೀ ಲೋಕವು ಆ ಪಾಪದ ದಾರಿ0ುಲ್ಲಿ ನಡೆದು "ನಾಶನ" ಅಥವಾ ಮರಣ ಹೊಂದಿದರೆಂದು **ವಿಶಾಲವಾದ ದಾರಿ0ುಲ್ಲಿ** ನೋಡಿದೆವು (**ನಕ್ಷೆ0ುಲ್ಲಿ ನೋಡಿರಿ**)

**ಎಲ್ಲಾ ಮನುಷ್ಯ ಜಾತಿಗೆ ಇದುವೇ ಕೊನೆ0ುೇ?**

**ಯೇಸುವಿನ ಬಗ್ಗೆ ಎಂದೂ ಕೇಳಿರದ ಹಾಗೂ ಆತನನ್ನು ನಂಬದೇ ಇರುವ ಎಲ್ಲಾ ಮನುಷ್ಯ ಜಾತಿಗೆ ನಿರೀಕ್ಷೆಯೇ ಇಲ್ಲವೇ?**

## ಯೇಸು ಈ ಲೋಕದ ರಕ್ಷಕನು ಸಹ ಅಲ್ಲವೇ?



ಇದನ್ನು ಕುರಿತು ಕೆಳಗಿನ ವಾಕ್ಯದಲ್ಲಿ ಸ್ಪಷ್ಟವಾಗಿ ಓದುತ್ತೇವೆ–

**1 ಯೋಹಾನ 2:2**

“ಆತನು ನಮ್ಮ ಪಾಪಗಳನ್ನು ನಿವಾರಣೆ ಮಾಡುವ ಯಜ್ಞವಾಗಿದ್ದಾನೆ; ನಮ್ಮ (ಸಭೆಯ) ಪಾಪಗಳನ್ನು ಮಾತ್ರವಲ್ಲದೆ. ಸಮಸ್ತ ಲೋಕದ ಪಾಪಗಳನ್ನು ಸಹ ನಿವಾರಣೆ ಮಾಡುತ್ತಾನೆ.”

ಹೌದು! ಕಲ್ವಾರಿ ಶಿಲುಬೆಯಲ್ಲಿ ಯೇಸುವಿನ ಮರಣವು “ನಮಗೆ” ಸಭೆಯ ಪಾಪಗಳಿಗೆ ಮಾತ್ರವಲ್ಲ,

**ಸಮಸ್ತ ಲೋಕದ ಪಾಪದ ನಿವಾರಣೆಗೆ ದಾರಿಯಾಗಿದೆ!**

ಮತ್ತು ಇದನ್ನು ಕುರಿತು ಕೆಳಗಿನ ವಾಕ್ಯದಲ್ಲಿ ಸ್ಪಷ್ಟವಾಗಿ ಓದುತ್ತೇವೆ

**1 ತಿಮೊಥೆಯನಿಗೆ 2:6**

“ಆತನು ಎಲ್ಲರ ವಿಮೋಚನಾರ್ಥವಾಗಿ ತನ್ನನ್ನು ಒಪ್ಪಿಸಿಬಿಟ್ಟನು. ಇದೇ ತಕ್ಕ ಸಮಯಗಳಲ್ಲಿ ಹೇಳಬೇಕಾದ ಸಾಕ್ಷಿಯು”

**ಹೌದು! ಯೇಸು ಎಲ್ಲರನ್ನು ಮರಣದಿಂದ ಬಿಡುಗಡೆ ಮಾಡಲು ತನ್ನ ಜೀವವನ್ನು ಈಡುಬಲಿಯಾಗಿ ಕೊಟ್ಟನು.**

**ಆದ್ದರಿಂದ, ನಾವು ಈ ಲೋಕಕ್ಕೂ ರಕ್ಷಣೆಯಿದೆಯೆಂದು ನಿರೀಕ್ಷಿಸಬೇಕು! ಅಲ್ಲವೇ?**

**ಹೌದು! ಲೋಕದ ರಕ್ಷಣೆಯೇ ಈ**

**..........ಮೂರನೆಯ ದಾರಿ.**

**ಇದನ್ನು ಕುರಿತು ಪರಿಚಯ ಹೊಂದಲಿದ್ದೇವೆ ಮತ್ತು ಈಗ ನೋಡಲಿದ್ದೇವೆ!**

ಈ ಲೋಕದ ರಕ್ಷಣೆಯು ಹೇಗಿರುತ್ತದೆ?

ಇದನ್ನು ಕುರಿತು ಕೆಳಗಿನ ವಾಕ್ಯದಲ್ಲಿ ಓದೋಣ –

**ಯೆಶಾಯ 35:8**

"ಅಲ್ಲಿ ರಾಜಮಾರ್ಗವಿರುವದು, ಹೌದು [ಹೋಗಿ ಬರುವ] ದಾರಿ; ಅದು ಪರಿಶುದ್ಧಮಾರ್ಗ ಎನಿಸಿಕೊಳ್ಳುವದು; ಯಾವ ಅಶುದ್ಧನೂ ಅಲ್ಲಿನಡೆಯನು, ಅದು ದೇವಜನರಿಗಾಗಿಯೇ ಇರುವದು, ಅಲ್ಲಿ ಹೋಗುವ ಮೂಢನೂ ದಾರಿತಪ್ಪನು."

ಹೌದು! ಈ **ಮೂರನೆ ದಾರಿಯನ್ನು** **ರಾಜಮಾರ್ಗ**ವೆಂದು ಕರೆಯಲಾಗುತ್ತದೆ!

## ಮೂರನೆ ದಾರಿ

# ರಾಜ ಮಾರ್ಗ

"...ಹೌದು, ಹೋಗಿ ಬರುವ ದಾರಿ, ಯಾವ ಅಶುದ್ಧನೂ ಅಲ್ಲಿ ನಡೆಯನು...."

ಇದು "ಹೋಗಿ ಬರುವ ಪ್ರಯಾಣಿಕ" ಅಥವಾ ದಾರಿಹೋಕನನ್ನು ಸೂಚಿಸುತ್ತದೆ.

ಈ ಲೋಕದ ಮನುಷ್ಯ ಜಾತಿಯು ಪಾಪದ ಪ್ರಾಬಲ್ಯದ ಅಸಾಯಕತೆಯಲ್ಲಿದೆ.

**ಆದರೆ "ಮೂಢನೂ" ಎಂಬುದು ಯಾರನ್ನು ಸೂಚಿಸುತ್ತದೆ?**

ಇದನ್ನು ಕುರಿತು ಕೆಳಗಿನ ವಾಕ್ಯದಲ್ಲಿ ಓದೋಣ –

**ಕೀರ್ತನೆ 14:1**

**"ದುರ್ಮತಿಗಳು - ದೇವರಿಲ್ಲವೆಂದು ಮನಸ್ಸಿನಲ್ಲಿ ಅಂದುಕೊಳ್ಳುತ್ತಾರೆ; ಅವರು ಕೆಟ್ಟುಹೋದವರು; ಹೇಯಕೃತ್ಯಗಳನ್ನು ನಡಿಸುತ್ತಾರೆ. ಅವರಲ್ಲಿ ಒಳ್ಳೆಯದನ್ನು ಮಾಡುವವರೇ ಇಲ್ಲ."**

ಹೌದು! ಈ "ಮೂಢರು" ಯಾರೆಂದರೆ **ಈ ಲೋಕದ ಮಹಾ ವಿದ್ಯಾವಂತರು** ಮತ್ತು ವಿಜ್ಞಾನಿಗಳು!




➡ ಇವರು ಬಹಿರಂಗವಾಗಿ ಪ್ರಚಾರಪಡಿಸುವುದೇನೆಂದರೆ

➡ ಈ **ವಿಶ್ವಕ್ಕೆ** ಯಾವ **ಸೃಷ್ಟಿಕರ್ತನಿಲ್ಲ**

ಮತ್ತು......ದೇವರೆಂಬುದೇ ಇಲ್ಲ

ಆದರೆ ಬಹು ಹಿಂದಿನ ಕಾಲದಲ್ಲಿನ ಕೆಲವು ನಿರ್ದಿಷ್ಟ ಪರಿಸ್ಥಿತಿಗಳಿಂದ ಎಲ್ಲಾ ಸೃಷ್ಟಿಗಳು ಬಂದವು.

**ಹೌದು! "ಬಿಗ್ ಬ್ಯಾಂಗ್" ಸಿದ್ಧಾಂತ ( Big Bang theory)**

ಹೌದು! ನಿಜವಾಗಿಯೂ, ಈ "ಮೂಢರೂ" ಆ **ರಾಜ ಮಾರ್ಗದಲ್ಲಿ** ವಂಚಿತರಾಗುವುದಿಲ್ಲ ಮತ್ತು ಸತ್ಯವನ್ನು **ಅರ್ಥಮಾಡುಕೊಳ್ಳುವುದರಲ್ಲಿ**


**ತಪ್ಪಿಹೋಗುವುದಿಲ್ಲವೆಂದು** ಕೆಳಗಿನ ವಾಕ್ಯದಲ್ಲಿ ಓದುತ್ತೇವೆ –

**ಯೆಶಾಯ** 29:24 ➔"ತಪ್ಪಿದ ಹೃದಯವುಳ್ಳವರೆಲ್ಲರೂ ವಿವೇಕಿಗಳಾಗುವರು, ಗುಣುಗುಟ್ಟುವವರು ಉಪದೇಶವನ್ನು ಗಮನಿಸುವರು"

ಈಗ ಈ ದಾರಿಯ ಕುರಿತು ಇನ್ನೂ ಹೆಚ್ಚಾಗಿ ನೋಡೋಣ–....

**ಯೆಶಾಯ** 35:9

"ಸಿಂಹವು ಅಲ್ಲಿರದು"



**ಇದು ಒಂದು ಪ್ರಾಣಿಯನ್ನು ಸೂಚಿಸುತ್ತದೆಯೇ?**

**ಹಾಗಾದರೆ ಅಲ್ಲಿ ಸಿಂಹಗಳೇ ಇರುವುದಿಲ್ಲವೇ?**

ಎಷ್ಟು ದುಃಖಕರವಾಗಿದೆ!

ಏಕೆಂದರೆ ಸಿಂಹವು ಮನೋಹರವಾದ ಮತ್ತು ಗಂಭೀರವಾದ ಪ್ರಾಣಿ!

**ಇದಲ್ಲದೆ....ಸಿಂಹವು ಎಲ್ಲಾ ಮೃಗಗಳಿಗೆ ರಾಜ!**



ಎಷ್ಟು ಜನರು ಈ ಸಿಂಹವನ್ನು ನೋಡಲು ಮೃಗಾಲಯಕ್ಕೆ ಹೋಗುತ್ತಾರೆ!

**ಹಾಗಾದರೆ ಇದು ನೇರವಾದ ಭಾಷೆಯೆ?**

ಇಲ್ಲ! ಇಲ್ಲಿ ಸಿಂಹ ಎಂಬದು ಏನನ್ನು ಸೂಚಿಸುತ್ತದೆಂದು ಕೆಳಗಿನ ವಾಕ್ಯದಲ್ಲಿ ಓದುತ್ತೇವೆ –

**1 ಪೇತ್ರ 5:8**

"ಸ್ವಸ್ಥಚಿತ್ತರಾಗಿರಿ, ಎಚ್ಚರವಾಗಿರಿ; ನಿಮ್ಮ ವಿರೋಧಿಯಾಗಿರುವ ಸೈತಾನನು ಗರ್ಜಿಸುವ ಸಿಂಹದೋಪಾದಿಯಲ್ಲಿ ಯಾರನ್ನು ನುಂಗಲಿ ಎಂದು ಹುಡುಕುತ್ತಾ ತಿರುಗುತ್ತಾನೆ."

ಹೌದು! ಇಲ್ಲಿ "ಸಿಂಹ"ವೆಂಬದು ಸೈತಾನನನ್ನು ಸೂಚಿಸುತ್ತದೆ!!!

ಆಹಾ! ಕೆಳಗಿನ ವಾಕ್ಯದಲ್ಲಿ ನಾವು ನೋಡುವುದೇನೆಂದರೆ ಸೈತಾನನು ಜನರನ್ನು **ವಂಚಿಸಲಾಗದಂತೆ,**

ಆ ಕಾಲದಲ್ಲಿ **ಬಂಧಿಸಲಾಗುತ್ತದೆ** –

**ಪ್ರಕಟನೆ 20:3** –"ಆ ಸಾವಿರ ವರುಷ ತೀರುವ ತನಕ ಸೈತಾನನು ಇನ್ನೂ ಜನಗಳನ್ನು ಮರುಳುಗೊಳಿಸದ ಹಾಗೆ ದೇವದೂತನು ಅವನನ್ನು ಅಧೋಲೋಕದಲ್ಲಿ ದೊಬ್ಬಿಬಾಗಿಲು ಮುಚ್ಚಿ ಅದಕ್ಕೆ ಮುದ್ರೆಹಾಕಿದನು."

ಹೌದು! ನೋಡಿರಿ! "ಸಿಂಹ"ವೆಂಬ ಸೈತಾನನನ್ನು **ಬಂಧಿಸಲಾಗುತ್ತದೆ** ಮತ್ತು ಜನರನ್ನು **ವಂಚಿಸಲು ಬಿಡುವುದಿಲ್ಲ.**

ನಂತರ ನಾವು ವಾಕ್ಯದಲ್ಲಿ ಹೀಗೆ ಓದುತ್ತೇವೆ–

**0ಯೆಶಾ0ಯ 35:9,10** –"ಸಿಂಹವು ಅಲ್ಲಿರದು, ಕ್ರೂರಜಂತು ಅಲ್ಲಿ ಸೇರದು, ಕಾಣುವದೇ ಇಲ್ಲ; ಬಿಡುಗಡೆ0ಯಾದವರೇ ಅಲ್ಲಿ ನಡೆ0ಯುವರು; 0ಯೆಹೋವನು ವಿಮೋಚಿಸಿದವರು ಹಿಂದಿರಿಗಿ ಶಾಶ್ವತಸಂತೋಷವೆಂಬ ಕಿರೀಟವನ್ನು ಧರಿಸಿಕೊಂಡು ಉತ್ಸಾಹಧ್ವನಿಯೊಡನೆ ಚೀಯೋನಿಗೆ ಸೇರುವರು; ಹರ್ಷಾನಂದಗಳನ್ನು ಅನುಭವಿಸುವರು, ಮೊರೆಯು ಕರಕರೆಯೂ ತೊಲಗಿ ಹೋಗುವವು."

**ಇವುಗಳೇನು? ಇವುಗಳ ಅರ್ಥವೇನು?**

"ಸಿಂಹ"ವು ಸೈತಾನನನ್ನು ಸೂಚಿಸುತ್ತದೆಂದು ನೋಡಿದೆವು – ಅದೇ ರೀತಿ ಈ "ಕ್ರೂರ ಜಂತು" ಸೈತಾನನಿಗೆ ಸಂಬಂಧಪಟ್ಟದ್ದಾಗಿರಬೇಕು ಮತ್ತು......ಸೈತಾನನ ಹತೋಟಿ0ಯಲ್ಲಿರಬೇಕು ಏಕೆಂದರೆ.....

ಸಿಂಹವು ಎಲ್ಲಾ ಮೃಗಗಳಿಗೆ **ರಾಜ!**

ಕುಡಿತದ ಸ್ಥಳ, ಸೂಳೆಗಾರಿಕೆ, ದಾರಿ ತಪ್ಪಿಸುವಂತಹ ಸಿನಿಮಾ (ಚಿತ್ರ) ಮತ್ತು ದೂರದರ್ಶನ ಇತ್ಯಾದಿ.

ಹೌದು! ಇವೆಲ್ಲವೂ ಸೈತಾನನ **ವ್ಯವಸ್ಥೆಗಳು** ಮತ್ತು **ಪಾಪಕ್ಕೆ ಕಾರಣಗಳು** – ಸಾರಾಯಿ ಅಂಗಡಿಗಳು, ಜೂಜಾಟ ಇವೆಲ್ಲವೂ ಪಾಪದ ದಾರಿಗೆ ಕೊಂಡೊ0ಯ್ಯುತ್ತದೆ ಮತ್ತು ನಿಧಾನವಾಗಿ **ನಾಶನಕ್ಕೆ** (ಮರಣಕ್ಕೆ) ಹೋಗುತ್ತದೆ.

**ಇವುಗಳನ್ನು ಕುರಿತು ನಾವು ಏನು ಓದುತ್ತೇವೆ?**

ಹೌದು! "........(ಅಲ್ಲಿ) ಕಾಣುವುದೇ ಇಲ್ಲ...."

## ಹೌದು! ಆ ದಾರಿಯಲ್ಲಿ ಈ ಎಲ್ಲಾ ವಿಧವಾದ ಪಾಪ ಮತ್ತು ಶೋಧನೆಗಳು ಇರುವುದೇ ಇಲ್ಲ!!

**ಇದೊಂದು ಹೊಸ ಲೋಕದ ವ್ಯವಸ್ಥೆಯಾಗಿರುತ್ತದೆ!**

ಹೌದು! ಕೆಳಗಿನ ವಾಕ್ಯವನ್ನು ಓದಿ ಮುಂದುವರಿಯೋಣ –

ಯೆಶಾಯ 35:9

“ಸಿಂಹವು ಅಲ್ಲಿರದು, ಕ್ರೂರಜಂತು ಅಲ್ಲಿ ಸೇರದು, ಕಾಣುವದೇ ಇಲ್ಲ; ಬಿಡುಗಡೆಯಾದವರೇ ಅಲ್ಲಿ ನಡೆಯುವರು;”

ಇಲ್ಲಿ ನಾವು “ವಿಮೋಚಿಸಿದವರು ಹಿಂದಿರುಗುವದನ್ನು” ನೋಡುತ್ತೇವೆ!!

**ಇದರ ಅರ್ಥವೇನು?**

ಆಹಾ, ಹೌದು! "ಕರ್ತನಲ್ಲಿ ವಿಮೋಚಿಸಿದವರು" ಎಂಬುದು ಈ ಲೋಕದ ಮನುಷ್ಯ ಜಾತಿಯು "ಎಲ್ಲಿ ಹೋಗಿದ್ದರೋ" ಅಲ್ಲಿಂದ ಹಿಂದಿರುಗುವುದನ್ನು ಸೂಚಿಸುತ್ತದೆ!!

**ಇಡೀ ಲೋಕವು ಎಲ್ಲಿಗೆ ಹೋಗಿತ್ತು?**

ನಾವು ಮೊದಲೇ ನೋಡಿದ ಹಾಗೆ ಇಡೀ ಲೋಕವು ಅಗಲವಾದ ದಾರಿಯಲ್ಲಿ ನಡೆಯುತ್ತಿತ್ತು,

ಅದು **ಮರಣ**ವೆಂಬ "ನಾಶನಕ್ಕೆ" ಕೊಂಡೊಯ್ಯುತ್ತಿತ್ತು

ಆದರೆ ಈಗ ಯೇಸುವಿನ ಈಡುಬಲಿಯ **ಕೃಪೆ**ಯಿಂದ ಅವರು **ಹಿಂದಿರುಗುವರು** –

"ದೂಳಿನ ನೆಲದೊಳಗೆ ಧೀರ್ಘನಿದ್ರೆ ಮಾಡುವವರಲ್ಲಿ (ಮರಣದಿಂದ) ಅನೇಕರು ಎಚ್ಚತ್ತು ..." (**ದಾನಿಯೇಲನು** 12:2)

ನಾವು ಓದುವುದೇನೆಂದರೆ ......ನಂತರದ ಸಮಯದಲ್ಲಿ **ಎಲ್ಲಾರೂ ಮತ್ತೆ ಜೀವ ಹೊಂದುತ್ತಾರೆಂದು** ಕೆಳಗಿನ ವಾಕ್ಯದಲ್ಲಿ ಸ್ಪಷ್ಟವಾಗಿ ಓದುತ್ತೇವೆ –

1 ಕೊರಿಂಥದವರಿಗೆ 15:22

“.....ಅದೇ ಪ್ರಕಾರ ಕ್ರಿಸ್ತನ ಸಂಬಂಧದಿಂದ ಎಲ್ಲರೂ ಜೀವಿತರಾಗುವರು.”

ಹೌದು! ಎಲ್ಲರೂ ಪುನರುತ್ಥಾನ ಹೊಂದುತ್ತಾರೆಂಬ ಈ ವಿಷಯವನ್ನು ಅಪೋ.ಪೌಲನು ಕೆಳಗಿನ ವಾಕ್ಯದಲ್ಲಿ ದೃಢಪಡಿಸುತ್ತಾನೆ –

**ಅಪೊಸ್ತಲರ ಕೃತ್ಯಗಳ 24:15**

**“ಇದಲ್ಲದೆ ನೀತಿವಂತರಿಗೂ ಅನೀತಿವಂತರಿಗೂ ಪುನರುತ್ಥಾನವಾಗುವದೆಂದು ಇವರು ದೇವರಲ್ಲಿ ನಿರೀಕ್ಷೆಯಿಟ್ಟಿರುವ ಪ್ರಕಾರವೇ ನಾನೂ ನಿರೀಕ್ಷೆಯುಳ್ಳವನಾಗಿದ್ದೇನೆ;”**



ಮನುಷ್ಯ ಜಾತಿಗೆ ಇಟ್ಟಿರುವ ದೇವರ ಚಿತ್ತವನ್ನು ಕೆಳಗಿನ ವಾಕ್ಯದಲ್ಲಿಯೂ ಸಹ ದೃಢಪಡಿಸಿಕೊಳ್ಳಬಹುದು –

**1 ತಿಮೊಥೆಯನಿಗೆ 2:3,4**

**“ಹಾಗೆ ಮಾಡುವದು ನಮ್ಮ ರಕ್ಷಕನಾದ ದೇವರ ಸನ್ನಿಧಿಯಲ್ಲಿ ಮೆಚ್ಚಿಕೆಯಾಗಿಯೂ ಯೋಗ್ಯವಾಗಿಯೂ ಅದೆ. ಎಲ್ಲಾ ಮನುಷ್ಯರು ರಕ್ಷಣೆಯನ್ನು ಹೊಂದಿ ಸತ್ಯದ ಜ್ಞಾನಕ್ಕೆ ಸೇರಬೇಕೆಂಬದು ಅತನ ಚಿತ್ತವಾಗಿದೆ.”**

ಹೌದು! ಇದೇ ದೇವರ **ಚಿತ್ತ! ಮತ್ತು** ಇದು **ನಿಶ್ಚಯವಾಗಿ ನೆರವೇರುತ್ತದೆ.**

ಆ ಮಹಿಮೆಯ ಮತ್ತು ಅದ್ಭುತವಾದ ದಿನ ಬಹಳ ದೂರವಿಲ್ಲ!

**ಈಗ ‘ರಕ್ಷಣೆ’ ಎಂದರೇನು?**

ಸತ್ಯವೇದದ ಭಾಷೆಯನ್ನು ಸರಿಯಾಗಿ ಅರ್ಥಮಾಡಿಕೊಂಡರೆ ಅದು **ಮರಣದಿಂದ ರಕ್ಷಣೆ ಹೊಂದಿರುವುದನ್ನು** ಸೂಚಿಸುತ್ತದೆ!

ಈ ಮೇಲಿನ ವಾಕ್ಯವು ಮನುಷ್ಯಕುಲದ ಎರಡು ಕಾರ್ಯ ವಿಧಾನದ **ರಕ್ಷಣೆಯನ್ನು** ಸೂಚಿಸುತ್ತದೆ –

➡ ಮೊದಲನೆಯದು........ಮರಣದಿಂದ ಬಿಡುಗಡೆ

➡ .....ಮತ್ತು ಎರಡನೆಯದಾಗಿ.....ಎಚ್ಚತ್ತು ಕೊಂಡವನು(ಳು) **ತನ್ನ ಪಾಪದ ಸ್ಥಿತಿಯಿಂದ** ಬಿಡುಗಡೆ ಹೊಂದುವದು.

**ಆದ್ದರಿಂದ "ಎಲ್ಲರೂ" ಪುನರುತ್ಥಾನ ಹೊಂದಿ ಮರಣದಿಂದ ರಕ್ಷಣೆ ಹೊಂದಬೇಕಾಗಿದೆ**

**ಮತ್ತು ಇದರ ನಂತರ -**

**"ಸತ್ಯದ ಜ್ಞಾನಕ್ಕೆ ಸೇರಬೇಕು"**

**ಈ ಮಹಾ ಅದ್ಭುತವಾದ ಪುನರುತ್ಥಾನವು ಹೇಗಿರುತ್ತದೆ?**

ಕೆಳಗಿನ ವಾಕ್ಯದಲ್ಲಿ ಓದೋಣ –

**ಲೂಕ 13:29,30**

"ಇದಲ್ಲದೆ ಪೂರ್ವ ಪಶ್ಚಿಮ ಉತ್ತರ ದಕ್ಷಿಣ ದಿಕ್ಕುಗಳಿಂದಲೂ ಜನರು ಬಂದು ದೇವರ ರಾಜ್ಯದಲ್ಲಿ ಕೂಡುವರು. ಇಗೋ, ಕಡೆಯವರಾಗಿರುವ ಕೆಲವರು ಮೊದಲಿನವರಾಗುವರು; ಮೊದಲಿನವರಾಗಿರುವ ಕೆಲವರು ಕಡೆಯವರಾಗುವರು ಅಂದನು."

ಸತ್ತವರ ಪುನರುತ್ಥಾನವು **ಹೇಗಿರುತ್ತದೆಂಬ ರಹಸ್ಯ** ಇಲ್ಲಿದೆ!!

➡ ......ಕಡೆಯವರಾಗಿ........(**ಸತ್ತವರು**) ಮೊದಲಿನವರಾಗುವರು.

(ಮರಣದಿಂದ ಮೊದಲು ಎಚ್ಚತ್ತುಕೊಳ್ಳುವರು)

➡ ....ಮೊದಲಿನವರಾಗಿ(**ಸತ್ತವರು**) ಕಡೆಯವರಾಗುವರು.

(ಮರಣದಿಂದ ಕಡೆಯಲ್ಲಿ ಎಚ್ಚೆತ್ತುಕೊಳ್ಳುವರು)

ನಿಜವಾಗಿಯೂ ಒಂದು **ಕ್ರಮವಿರಬೇಕು!**

ಪುನರುತ್ಥಾನದ ಸಮಯದಲ್ಲಿ **ಕೊನೆಯ ಸಂತತಿಯವರು ಮೊದಲು ಎಚ್ಚೆತ್ತು ಕೊಳ್ಳುವರು**....ಹಾಗೆಯೇ ಮೊದಲ ಸಂತತಿಯವರು (ಆದಾಮ ಮತ್ತು ಅವನ ಸಂತತಿ) **ಕೊನೆಯಲ್ಲಿ ಎಚ್ಚೆತ್ತು ಕೊಳ್ಳುವರು!!**

ಇದು ಕುಟುಂಬ, ಬಂಧುಗಳು ಮತ್ತು ಸ್ನೇಹಿತರು ರಾಜ್ಯದ ಸ್ಥಿತಿಯ, ಹೊಸ **ವಾತಾವರಣಕ್ಕೆ ಹೊಂದಿಕೊಳ್ಳುವದಕ್ಕೆ** ಮತ್ತು **ಕ್ರಮಪಡಿಸಿಕೊಳ್ಳುವದಕ್ಕೆ** ಹೀಗಾಗುತ್ತದೆ.

ಸಾವಿನಿಂದ ಜೀವಂತವಾಗಿ ಎದ್ದ ಮೇಲೆ ಆ ವ್ಯಕ್ತಿಯ ಶರೀರ ಮತ್ತು ಆತನ ಸ್ಥಿತಿಯು ಸಾಯುವಾಗ ಯಾವ ಸ್ಥಿತಿಯಲ್ಲಿತ್ತೋ ಅದೇ ಸ್ಥಿತಿಯಲ್ಲಿರುತ್ತದೆ.

ಬುದ್ಧಿಯಲ್ಲಿ ಮತ್ತು ಶರೀರದಲ್ಲಿಯೂ ಸಹ!!

**ಅವರಲ್ಲಿ ಯಾವ ವಿಧವಾದ ಬದಲಾವಣೆಯೂ ಇರುವುದೇ ಇಲ್ಲ!**

ಇದನ್ನು ಕೆಳಗಿನ ವಾಕ್ಯದಲ್ಲಿ ಓದಿ ದೃಢಪಡಿಸಿಕೊಳ್ಳುತ್ತೇವೆ –

**ಯೋಬನು 19:26,27**

"ನನ್ನ ಚರ್ಮವು ಹೀಗೆ ಬಿರಿದು ಹಾಳಾದ ಬಳಿಕ ನಿರ್ದೇಹನಾಗಿ ದೇವರನ್ನು ನೋಡುವೆನು; ಕಣ್ಣಾರೆ ಕಾಣುವೆನು, ನಾನೇ ನಾನಾಗಿ ನೋಡುವೆನು, ಮತ್ತೊಬ್ಬನಾಗಿ ಅಲ್ಲ. ನನ್ನ ಹೃದಯವು [ಹಂಬಲಿಕೆಯಿಂದ] ನನ್ನಲ್ಲಿ ಕುಂದಿದೆ."



ದಯವಿಟ್ಟು ಈ ವಾಕ್ಯವನ್ನು ಗಮನಿಸಿ –"ನಾವೇ ನಾವಾಗಿ ನೋಡುವೆನು, ಮತ್ತೊಬ್ಬನಾಗಿ ಅಲ್ಲ."

ಹೌದು! ಅವರ ವ್ಯಕ್ತಿತ್ವದಲ್ಲಿ ಯಾವ ಬದಲಾವಣೆಯೂ ಇರುವುದಿಲ್ಲ!

ನಂತರ, **ಪಾಪದಿಂದ ಬಿಡುಗಡೆಯಾಗ** ಬೇಕಾಗಿದೆ!


**ಅದು ಹೇಗೆ ನೆರವೇರುತ್ತದೆ?**

ಇದಕ್ಕೆ ಉತ್ತರವನ್ನು ಕೆಳಗಿನ ವಾಕ್ಯದಲ್ಲಿ ಓದುತ್ತೇವೆ –

**ಯೋಹಾನ 17:17**

"ಇವರನ್ನು ಸತ್ಯದಲ್ಲಿ ಸೇರಿಸಿ ಪ್ರತಿಷ್ಠೆಪಡಿಸು; ನಿನ್ನ ವಾಕ್ಯವೇ ಸತ್ಯವು."

ಹೌದು! ಪಾಪದ ದಾರಿಗಳಿಂದ **ಪವಿತ್ರತೆ** ಅಥವಾ....ಪರಿಶುದ್ಧತೆಯು ಸತ್ಯದ ಬಲದಿಂದ ಮಾತ್ರ ಸಾಧ್ಯವಾಗುತ್ತದೆ!



ಆದ್ದರಿಂದ ಎಲ್ಲರೂ "......ಸತ್ಯದ ಜ್ಞಾನಕ್ಕೆ ಸೇರಬೇಕೆಂಬುದು....."(ಅವಶ್ಯ ವಾಗಿದೆ)

**ಇದು ಹೇಗೆ ಸಾಧ್ಯ?**

ಮೊದಲ ಹೆಜ್ಜೆಯನ್ನು ಕೆಳಗಿನ ವಾಕ್ಯದಲ್ಲಿ ಓದುತ್ತೇವೆ –

**ಯೆಶಾಯ 29:18,32:3**

" ಆ ದಿನದಲ್ಲಿ ಕಿವುಡರು ಶಾಸ್ತ್ರದ ಮಾತುಗಳನ್ನು ಕೇಳುವರು, ಮೊಬ್ಬುಕತ್ತಲುಗಳಲ್ಲಿಯೂ ಕುರುಡರ ಕಣ್ಣು ಕಾಣುವದು



ಆಗ ನೋಡುವವರ ಕಣ್ಣು ಮೊಬ್ಬಾಗದು, ಕೇಳುವವರ ಕಿವಿ ಮಂದವಾಗದು."

ಇದು ಖಂಡಿತವಾಗಿ0ಯೂ **ನೇರ ಭಾಷೆ0ು** ಕಣ್ಣುಗಳು ಮತ್ತು ಕಿವಿಗಳಲ್ಲ!

ಇದು ಸೈತಾನನ ಬಂಧನದಿಂದ ಹೇಗೆ ಈ ಲೋಕದ ತಿಳುವಳಿಕೆ0ು "ಕಣ್ಣುಗಳು" ಮತ್ತು "ಕಿವಿಗಳು" **ತೆರೆ0ುಲ್ಪಡುವುದೆಂದು ಬೋಧಿಸುತ್ತದೆ!**

ಹೌದು! ಸುಳ್ಳು ಬೋಧನೆಗಳನ್ನು ಮೂಡನಂಬಿಕೆಗಳನ್ನು ಅರ್ಥಮಾಡಿಕೊಳ್ಳಲು ಸಮಸ್ತ ಲೋಕವು ಕುರುಡುತನದಿಂದ ಬಿಡುಗಡೆ ಮಾಡಲ್ಪಡುವದು.......

ಮತ್ತು ದೇವರ ಸತ್ಯವನ್ನು ಸತ್ಯವೇದದಲ್ಲಿ ನೋಡಿ ಗ್ರಹಿಸಿಕೊಳ್ಳುತ್ತಾರೆ. ಇದನ್ನೇ, ಅವರು ಮೊದಲು ನೋಡದೇ ಇರುವುದರ ಕಾರಣವನ್ನು ಕೆಳಗಿನ ವಾಕ್ಯದಲ್ಲಿ ಓದುತ್ತೇವೆ –

**2 ಕೊರಿಂಥದವರಿಗೆ 4:4** ➔"ಇವರಲ್ಲಿ ದೇವರ ಪ್ರತಿರೂಪವಾಗಿರುವ ಕ್ರಿಸ್ತನ ಪ್ರಭಾವವನ್ನು ತೋರಿಸುವ ಸುವಾರ್ತೆ0ು ಪ್ರಕಾಶವು ಉದ0ುವಾಗಬಾರದೆಂದು ಈ ಪ್ರಪಂಚದ ದೇವರು ನಂಬಿಕೆಯಿಲ್ಲದವರ ಮನಸ್ಸನ್ನು ಮಂಕುಮಾಡಿದನು."

ಹೌದು! ಸೈತಾನನು ಅವರ ಮನಸ್ಸನ್ನು **ವಂಚನೆ** ಮತ್ತು **ಸುಳ್ಳುಗಳಿಂದ ಕುರುಡು ಮಾಡಿದ್ದಾನೆ!**

ಹೌದು! ನಂತರ ನಾವು ಭೂಮಿ0ುಲ್ಲಿ **ಸತ್ಯವು ತುಂಬಿರುವದನ್ನು ಕುರಿತು** ಕೆಳಗಿನ ವಾಕ್ಯದಲ್ಲಿ ಓದುತ್ತೇವೆ –

**ಹಬಕ್ಕೂಕ 2:14**

"ಸಮುದ್ರದಲ್ಲಿ ನೀರು ಹೇಗೋ ಹಾಗೆ0ುೇ ಭೂಮಿ0ುಲ್ಲಿ 0ುೆಹೋವನ ಮಹಿಮೆ0ು ಜ್ಞಾನವು ತುಂಬಿಕೊಂಡಿರುವದು."

ಹೌದು! **ಸತ್ಯ** ವಾಕ್ಯವು **ಸಮಸ್ತ ಲೋಕದಲ್ಲಿ** ಹರಡುವದು.

**ಇದು ಹೇಗೆ ಎಂದು ನೀವು ಕೇಳಬಹುದು?**

ನಮ್ಮ ಕಣ್ಣು ಮುಂದೆ0ುೇ **ಮಾಧ್ಯಮಗಳ** ಮೂಲಕ ಈ ದಿನಗಳಲ್ಲಿ ನೋಡುತ್ತೇವೆ–

**ದೂರದರ್ಶನ,** ಚಲನ ಚಿತ್ರ, ರೆಡಿಯೋ, ಪುಸ್ತಕಗಳು, ಅಂತರ್ಜಾಲ, ಗಣಕ0ುಂತ್ರ ಇತರೆ,

ಆದ್ದರಿಂದ ಈ **ರಾಜ ಮಾರ್ಗವನ್ನು** – "ಪರಿಶುದ್ಧ ಮಾರ್ಗ" ವೆಂದು ಕರೆ0ುಲಾಗುವದು –

**ಆದ್ದರಿಂದ ನಿಧಾನವಾಗಿ ಮರಣ ಮತ್ತು ಅಜ್ಞಾನವನ್ನು.......**
**ಪೂರ್ತಿಯಾಗಿ ಎಲ್ಲಾ ಜನರಿಂದ ತೆಗೆದುಹಾಕಲಾಗುವುದು!!**

ಇದನ್ನೇ ನಾವು ಕೆಳಗಿನ ವಾಕ್ಯದಲ್ಲಿ ಓದಿ ನೋಡುತ್ತೇವೆ -

**ಯೆಶಾಯ 25:7**

"ಮತ್ತು ಸಮಸ್ತ ಜನಾಂಗಗಳನ್ನು ಮುಚ್ಚಿರುವ ಮುಸುಕನ್ನೂ ಸಕಲ ದೇಶೀಯರ ಮೇಲೆ ಹಾಕಿರುವ ತೆರೆಯನ್ನೂ ಇದೇ ಪರ್ವತದಲ್ಲಿ ನಾಶಮಾಡುವನು."

**ಇದರ ಅರ್ಥವೇನು?**

ಇವು ಸಂಕೇತಗಳು ಮತ್ತು ಇವು ಸೂಚಿಸುವುದೇನೆಂದರೆ–

**ಮುಸುಕು**

ಇದು **ಆದಾಮನಿಂದ ಬಂದ ಮರಣದ** ಸ್ವಾಸ್ತ್ಯವು ಎಲ್ಲಾ ಮನುಕುಲದ ಮೇಲೆ, ಮನುಕುಲವನ್ನು ಮುಚ್ಚಿರುವುದನ್ನು ಸೂಚಿಸುತ್ತದೆ.

**ಹೌದು!** ಯಾವ ಪ್ರಕಾರ ಆದಾಮನ ಸಂಬಂಧದಿಂದ ಎಲ್ಲರೂ ಸಾಯುವವರಾದರೋ.....

ಮತ್ತು, ನಂತರ ನಾವು ಕೆಳಗಿನ ವಾಕ್ಯದಲ್ಲಿ ಹೀಗೆ ಓದುತ್ತೇವೆ –

**ತೆರೆಯನ್ನೂ**

ಇದು **ಎಲ್ಲಾ ಮನುಕುಲದವರ** ತಿಳುವಳಿಕೆಯ **ಕಣ್ಣುಗಳು ಮುಚ್ಚಿರುವುದನ್ನು ಸೂಚಿಸುತ್ತದೆ** ಎಂದು ಕೆಳಗಿನ ವಾಕ್ಯದಲ್ಲಿ ಓದುತ್ತೇವೆ –

ಯೆಶಾಯ 60:2 ➔ "ಇಗೋ, ಕತ್ತಲು ಭೂಮಿಯನ್ನು ಆವರಿಸಿದೆ, ಕಾರ್ಗತ್ತಲು ಜನಾಂಗಗಳನ್ನು ಮುಚ್ಚಿದೆ;........"

2 ಕೊರಿಂಥದವರಿಗೆ 4:4 ➔ "ಇವರಲ್ಲಿ ದೇವರ ಪ್ರತಿರೂಪವಾಗಿರುವ ಕ್ರಿಸ್ತನ ಪ್ರಭಾವವನ್ನು ತೋರಿಸುವ ಸುವಾರ್ತೆಯ ಪ್ರಕಾಶವು ಉದಯವಾಗಬಾರದೆಂದು ಈ ಪ್ರಪಂಚದ ದೇವರು ನಂಬಿಕೆಯಿಲ್ಲದವರ ಮನಸ್ಸನ್ನು ಮಂಕುಮಾಡಿದನು."

ಮತ್ತು ಈ **ರಾಜಮಾರ್ಗದ ವಿಧೇಯರಿಗೆ** ಅನೇಕ **ಪ್ರೋತ್ಸಾಹಕರ ವಿಷಯವಿದೆ** ಎಂದು ಕೆಳಗಿನ ವಾಕ್ಯದಲ್ಲಿ ಓದುತ್ತೇವೆ –

## ಯೋಬನು 33:24,25

“ ದೇವರು ಒಂದು ವೇಳೆ ಆ ಮನುಷ್ಯನಿಗೆ ಮೆಚ್ಚಿ - ಈಡು ಸಿಕ್ಕಿತು, ಅಧೋಲೋಕಕ್ಕೆ ಇಳಿಯದಂತೆ ಇವನನ್ನು ರಕ್ಷಿಸು ಎಂದು ಅಪ್ಪಣೆಕೊಟ್ಟರೆ ಅವನ ದೇಹವು ಬಾಲ್ಯಕ್ಕಿಂತಲೂ ಕೋಮಲವಾಗುವದು, ಅವನು ಪುನಃ ಎಳೆಯತನದ ದಿನಗಳನ್ನು ಅನುಭವಿಸುವನು”

ಆಹಾ! ಹೌದು! ಈ ವಾಕ್ಯವು ಬಹಳ ಅದ್ಭುತವಾದ ವಿಷಯವನ್ನು ಕುರಿತು ಮಾತನಾಡುತ್ತದೆ...... ಮನುಷ್ಯನು **ಸ್ವಲ್ಪವೂ ಊಹಿಸದಿರುವ ವಿಷಯ!**

## ಇದು ವಯಸನ್ನು ಹಿಂದಕ್ಕೆ ಹೋಗುವಂತೆ ಮಾಡುವ ಕ್ರಮ!!!



ಹೌದು! ಜನರು ದಿನದಿಂದ ದಿನಕ್ಕೆ ತಮ್ಮ ಹಳೆಯ ಸ್ಥಿತಿಯಿಂದ **ಯೌವನಸ್ಥರಾಗುತ್ತಾರೆ!**

**ಆಹಾ! ಹೌದು! ಅವರು ಪ್ರತಿದಿನ ಯೌವನಸ್ಥರಾಗಲು ಆರಂಭಿಸುತ್ತಾರೆ!!**

ಬಿಳಿಕೂದಲು **ಕಪ್ಪಗಾಗುತ್ತದೆ!**......ಸುಕ್ಕಾದ ಚರ್ಮವು **ಮೃದುವಾಗುತ್ತಾ** ಬರುತ್ತದೆ!

ಬಲಹೀನರು **ಬಲವಂತರಾಗಿ ಮಾರ್ಪಡುತ್ತಾರೆ!**......ಬಿದ್ದು ಹೋದ ಹಲ್ಲುಗಳು ಮತ್ತೆ **ಬೆಳೆಯಲಾರಂಭಿಸುತ್ತದೆ!**


ಪರಿಪೂರ್ಣತೆಯೂ ಬರುತ್ತಿದ್ದ ಹಾಗೆ ಎಲ್ಲಾ ಅಪರಿಪೂರ್ಣತೆಗಳು ಮಾಯವಾಗುವವು!

ನಂತರ ಅಲ್ಲಿ ಬಹಳ ಉದಾರವಾದ ಶೋಧನೆಯ ಕಾಲವು ಇರುತ್ತದೆ.

## ಯೆಶಾಯ 65:20

**“ಕೆಲವು ದಿವಸ ಮಾತ್ರ ಬದುಕತಕ್ಕ ಕೂಸಾಗಲಿ ವಯಸ್ಸಾಗದೆ ಮುದುಕನಾದವನಾಗಲಿ ಅಲ್ಲಿ ಇರುವದಿಲ್ಲ; ಯುವಕನು ನೂರು ವರುಷದೊಳಗೆ ಸಾಯುವನು, ಪಾಪಿಷ್ಠನಿಗೂ ನೂರು ವರುಷದೊಳಗೆ ಶಾಪತಗಲದು,”**

ಹೌದು ಎಲ್ಲರೂ ತಮ್ಮ ಪಾಪದ ದಾರಿಯಿಂದ ಮಾನಸಾಂತರ ಹೊಂದಲು ಮತ್ತು ತಿದ್ದಿ ಸರಿ ಮಾಡಿಕೊಳ್ಳಲು 100 ವರ್ಷಗಳ ಕಾಲಾವಧಿಯನ್ನು ಹೊಂದುವರು.

 **ಇದರ ಬಗ್ಗೆ ಸ್ವಲ್ಪ ಯೋಚಿಸಿ ನೋಡಿ!!**

ಈ ದಿನ ಒಬ್ಬರು ಆಯುಷ್ಕಾಲವು ಅಷ್ಟು ವರುಷಗಳನ್ನು ಮುಟ್ಟುವುದಿಲ್ಲ!!

ಎಲ್ಲಾ ಮನುಷ್ಯ ಕುಲವನ್ನು ಪ್ರೋತ್ಸಾಹಿಸಿ ತಮ್ಮ ಪಾಪಗಳಿಗಾಗಿ ಪಶ್ಚಾತ್ತಾಪ ಪಡಲು ಎಂತಹ **ದೊಡ್ಡ ಕೃಪೆಯ** ಕಾಲವನ್ನು ದೇವರಿಟ್ಟಿದ್ದಾನೆ!

**ಆಹಾ! ಆ ಕಾಲದಲ್ಲಿ ಮೊಂಡತನದ ಅವಿಧೇಯತೆಯ ಜನರು ಯಾರಾದರು ಇರುವರೆ?**

ಇದಕ್ಕೆ ಉತ್ತರವನ್ನು ಕೆಳಗಿನ ವಾಕ್ಯದಲ್ಲಿ ಓದುತ್ತೇವೆ –

## ಯೆಶಾಯ 26:10

**“ದುಷ್ಟರನ್ನು ಕರುಣಿಸಿದರೂ ಅವರು ಧರ್ಮಜ್ಞಾನವನ್ನು ಪಡೆಯರು; ಯೆಹೋವನ ಮಹಿಮೆಯನ್ನು ಲಕ್ಷಿಸದೆ ಯಥಾರ್ಥವಂತರ ದೇಶದಲ್ಲಿಯೂ ಅನ್ಯಾಯವನ್ನಾಚರಿಸುವರು.”**

ಹೌದು! ದೇವರು ಕೃಪೆ ಮತ್ತು ಕನಿಕರವನ್ನು ತೋರಿಸಿದರೂ ಸಹ.....ಕೆಲವರು ಇರುವರು!





ಇವರು ತಮ್ಮ ಪಾಪದ ಮಾರ್ಗಗಳಿಂದ ಮನಸಾಂತರ ಹೊಂದದೆ ಇರುವುದನ್ನು ಅಥವಾ ಸುಧಾರಣೆ ಹೊಂದದೆಯಿರುವುದನ್ನು ಆರಿಸಿಕೊಳ್ಳುವರು.

ಹೌದು! ಅವರು ಸೈತಾನನ ದಾರಿಯನ್ನು ಹಿಡಿದುಕೊಂಡು ..........ದೇವರಿಗೆ ಮತ್ತು.......ಆತನ ನೀತಿಗೆ ಶತ್ರುಗಳಾಗುವರು.

ಆದರೆ ಉಳಿದವರನ್ನು ಕುರಿತು ಏನು ಓದುತ್ತೇವೆ? ಈಗ ಕೆಳಗಿನ ವಾಕ್ಯದಲ್ಲಿ ಓದೋಣ–

**ಯೆಶಾಯ 35:10**

**“ಯೆಹೋವನು ವಿಮೋಚಿಸಿದವರು ಹಿಂದಿರುಗಿ ಶಾಶ್ವತಸಂತೋಷವೆಂಬ ಕಿರೀಟವನ್ನು ಧರಿಸಿಕೊಂಡು ಉತ್ಸಾಹಧ್ವನಿಯೊಡನೆ ಚೀಯೋನಿಗೆ ಸೇರುವರು;”**

ಮತ್ತೆ ಕೆಳಗಿನ ವಾಕ್ಯದಲ್ಲಿ......

**ಕೀರ್ತನೆ 22:27-28**

**“ಭೂಮಂಡಲದವರೆಲ್ಲರು ಎಚ್ಚರಗೊಂಡು ಯೆಹೋವನ ಕಡೆಗೆ ತಿರುಗಿಕೊಳ್ಳುವರು; [ಯೆಹೋವನೇ,] ಎಲ್ಲಾ ಜನಾಂಗಗಳವರು ನಿನಗೆ ಅಡ್ಡಬೀಳುವರು. ರಾಜ್ಯವು ಯೆಹೋವನದೇ; ಎಲ್ಲಾ ಜನಾಂಗಗಳಿಗೂ ಆತನೇ ಒಡೆಯನು.”**

**ಹೌದು! ಎಲ್ಲರೂ (ಬಹಳಷ್ಟು ಜನರು) ದೇವರ ಕಡೆಗೆ ತಿರುಗಿ ಕೊಳ್ಳುವರು ಮತ್ತು ವಿಧೇಯರಾಗಿ ಆರಾಧಿಸುವರು!**



## ಈ ಮೂರನೇ ಮಾರ್ಗ.......ರಾಜ ಮಾರ್ಗ........ಯಾವಾಗ ತೆರೆಯಲ್ಪಡುವದು?

ಇದಕ್ಕೆ ಉತ್ತರವನ್ನು ಕೆಳಗಿನ ವಾಕ್ಯದಲ್ಲಿ ಓದುತ್ತೇವೆ......

**1 ಕೊರಿಂಥದವರಿಗೆ 15:23**

"ಆದರೆ ಪ್ರತಿಯೊಬ್ಬನು ತನ್ನ ತನ್ನ ತರಗತಿಯಲ್ಲಿರುವವನು. ಕ್ರಿಸ್ತನು ಪ್ರಥಮಫಲ; ತರುವಾಯ ಕ್ರಿಸ್ತನ ಪ್ರತ್ಯಕ್ಷತೆಯಲ್ಲಿ ಆತನವರು ಎದ್ದುಬರುವರು"

ಹೌದು! ಯೇಸು ಕ್ರಿಸ್ತನ **ಎರಡನೆಯ ಬರುವಿಕೆ**ಯಲ್ಲಿ.....ಈ ರಾಜ ಮಾರ್ಗವು ತೆರೆಯಲ್ಪಡುತ್ತದೆ.

ಯೇಸು ತನ್ನ ಮೊದಲನೆಯ ಬರುವಿಕೆಯಲ್ಲಿ ಈ ಮಾರ್ಗವನ್ನು (ದಾರಿಯನ್ನು) ಕುರಿತು **ಮಾತನಾಡಲಿಲ್ಲ**

ಏಕೆಂದರೆ ಆತನು ಮೊದಲನೆಯ ಬರುವಿಕೆಯಲ್ಲಿ ಬಂದದ್ದು..... **ಎರಡನೆಯ ಮಾರ್ಗ**ವನ್ನು ತೆರೆಯುವದಕ್ಕಾಗಿ.



ಬಿಕ್ಕಟ್ಟಾದ ದಾರಿಯು ಮಹಾ ಪರಲೋಕದ ರಕ್ಷಣೆಗಾಗಿ....
ಆದರೆ ಆತನ ಎರಡನೆಯ ಬರುವಿಕೆಯಲ್ಲಿ
ಈ ಮೂರನೇ ಮಾರ್ಗವನ್ನು ತೆರೆಯುವನು.

## ರಾಜಮಾರ್ಗ


ಮೊದಲು ದೇವರು ಮಾನವ ಪರಿಪೂರ್ಣತೆಯಲ್ಲಿ ಸೃಷ್ಟಿಸಿದ ಆ ಆದಾಮನ ಸ್ಥಿತಿಗೆ ಎಲ್ಲಾ ಮನುಷ್ಯಕುಲವನ್ನು ತರುವ ರಕ್ಷಣಾ ಮಾರ್ಗ ಇದಾಗಿದೆ.

ಹೌದು! ಪವಿತ್ರಾತ್ಮದಿಂದ ಈ ಮೂರನೇ ದಾರಿಯನ್ನು ಕುರಿತು ಅರ್ಥಮಾಡಿಕೊಳ್ಳಲು ಮಾರ್ಗದರ್ಶನ ಹೊಂದಿದ್ದೇವೆ ಯಾಕಂದರೆ ನಾವು ಈಗ


....ಕರ್ತನ ಎರಡನೆಯ ಬರುವಿಕೆಗೆ ಬಹಳ ಹತ್ತಿರವಿದ್ದೇವೆ ಮತ್ತು

........ಈ ಮೂರನೇ ದಾರಿಯು ತೆರೆಯುವ ಕಾಲ ಹತ್ತಿರವಿದೆ!!

ಪ್ರಿಯ ಸಹೋದರ ಸಹೋದರಿಯರೇ,
ಇದೇ ಸತ್ಯವೇದದ “"ಮೂರು ದಾರಿಗಳು”!!



For Private Circulation Only




NOT FOR SALE